
# ಗಜಾನನ ಮಹಾಲೆ



ವಸಂತ ಕುಲಕರ್ಣಿ

ರಂಗಸಂಪನ್ನರು ಮಾಲಿಕೆ : ೨೦

# ಗಜಾನನ ಮಹಾಲೆ

ವಸಂತ ಕುಲಕರ್ಣಿ

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨

**GAJANAN MAHALE** : A Monograph in Kannada by
Vasant Kulkarni
No. 4, Sambaragi Building, Bhuvaneshwari Nagar, Nagashettikoppa,
Hubli - 580 023
Published by
B. T. Muni Rajaiah
Registrar, Karnataka Nataka Academy
Ravindra Kalakshetra, J. C. Road, Bangalore - 560 002

| | | |
|---|---|---|
| Chief Editor | : | C. G. Krishnaswamy |
| Editors | : | Dr. Siddhaling Pattanshetti<br>K. V. Nagaraja Murthy,<br>T. Raghu, Hooli Shekhar |
| First Impression | : | February, 2001 |
| Pages | : | 42 |
| Cover Design | : | Krishna Raichur |

© Author

Printed by
Manohar Printing Press, Market, Dharwad - 580 001
Ph : 0836 – 790030
Price : Rs. 30/-

•

| | | |
|---|---|---|
| ಗಜಾನನ ಮಹಾಲೆ | : | ರಂಗಸಂಪನ್ನರ ಕಿರು ಜೀವನಚರಿತ್ರೆ |
| ಲೇಖಕರು | : | ವಸಂತ ಕುಲಕರ್ಣಿ |
| ಪ್ರಕಾಶನ | : | ಬಿ. ಟಿ. ಮುನಿರಾಜಯ್ಯ<br>ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ<br>ರವೀಂದ್ರ ಕಲಾಕ್ಷೇತ್ರ, ಬೆಂಗಳೂರು – ೫೬೦ ೦೦೨ |
| ಪ್ರಧಾನ ಸಂಪಾದಕರು | : | ಸಿ. ಜಿ. ಕೃಷ್ಣಸ್ವಾಮಿ |
| ಸಂಪಾದಕರು | : | ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ<br>ಕೆ. ವಿ. ನಾಗರಾಜಮೂರ್ತಿ,<br>ಟಿ. ರಘು, ಹೂಲಿ ಶೇಖರ್ |
| ಪ್ರಥಮ ಮುದ್ರಣ | : | ಫೆಬ್ರುವರಿ, ೨೦೦೧ |
| ಮುದ್ರಣ | : | ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್<br>ಧಾರವಾಡ - ೫೮೦ ೦೦೧ |
| ಬೆಲೆ | : | ರೂ. ೩೦/- |

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾರ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧. ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮. ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧೦. ಪಿ. ಬಿ. ಧುತ್ತರಗಿ, ೧೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪. ಸುಭದ್ರಮ್ಮ ಮನ್ಸೂರು, ೧೫. ಡಿ. ದುರ್ಗಾದಾಸ, ೧೬. ರಾಜಾನಂದ, ೧೭. ಪ್ರಸನ್ನ, ೧೮. ಕೆ. ಎನ್. ಟೇಲರ್, ೧೯. ಎಂ. ವಿ. ವಾಸುದೇವರಾವ್ ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರುಳ್ಳ ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

ಸಿ. ಜಿ. ಕೃಷ್ಣಸ್ವಾಮಿ
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ, ಬೆಳೆಯುತ್ತ, ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ. ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು, ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು

ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರೆಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು. ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಗಜಾನನ ಮಹಾಲೆ ಅವರನ್ನು ಕುರಿತು ವಸಂತ ಕುಲಕರ್ಣಿ ಅವರು ಬರೆದ ಪುಸ್ತಕ. ಪ್ರಸಾಧನ ಕಲೆಗೆ ಬೆಂಗಳೂರು ಭಾಗದಲ್ಲಿ ನಾಣಿಯವರು ಹೆಸರಾಗಿರುವ ರೀತಿಯಲ್ಲಿಯೇ ಉತ್ತರ ಕರ್ನಾಟಕದ ತುಂಬ ನಗರ - ಗ್ರಾಮಗಳಲ್ಲೆಲ್ಲ ಮನೆಮಾತಾಗಿರುವ ಜನಪ್ರಿಯ ಮೇಕಪ್ ಕಲಾವಿದರು ಗಜಾನನ ಹರಿಕೃಷ್ಣ ಮಹಾಲೆ. ಬದುಕಿನ ಅಸಂಖ್ಯ ಕ್ರೂರ ಬೆಟ್ಟ ಕೊಳ್ಳಗಳಲ್ಲಿ ಅಲೆದಾಡಿದರೂ ಬಾಲ್ಯದಿಂದ ಪ್ರೀತಿಸಿದ ಮನೆತನದ ಕ್ಷೌರಿಕ ವೃತ್ತಿ ಮತ್ತು ಆರಾಧಿಸಿದ ಪ್ರಸಾಧನ ಪ್ರವೃತ್ತಿ ಎರಡನ್ನೂ ಗೌರವಿಸಿದವರು ಗಜಾನನ ಮಹಾಲೆ. ತಂದೆ ಹರಿಕೃಷ್ಣ ಮಹಾಲೆಯವರ ಗುರುತ್ವ ಹಾಗೂ ಆಶೀರ್ವಾದಗಳನ್ನು ನಂಬಿ ಬೆಳೆದ ಗಜಾನನ ಏಕಲವ್ಯನಂತೆ ವಿದ್ಯೆಯ ಸಾಧನೆ ಮಾಡಿದರು. ಶಾಲೆಯಲ್ಲಿ ಹೆಚ್ಚು ಕಲಿಯಲಾಗದಿದ್ದರೂ ಬದುಕಿನ ವಿಶಾಲ ಅಂಗಳದಲ್ಲಿ ಅವರು ಕಲಿತದ್ದು ಬಹಳ. ಗಣಪತಿಯ ವಿಶಿಷ್ಟ ಮೂರ್ತಿಗಳ ಶಿಲ್ಪಕಾರ, ನಟ, ಸಂಗೀತಕಾರ, ವಿವಿಧ ವಾದ್ಯವಾದಕ, ಹಿನ್ನೆಲೆ ಸಂಘಟನಾ ಚತುರ ಎಂದೆಲ್ಲ ಆಯಾಮಗಳ ವ್ಯಕ್ತಿತ್ವ ಹೊಂದಿರುವ ಗಜಾನನ ಅವರು ಸಜ್ಜನರು. ಪ್ರಸಾಧನದ ಮೂಲಕ ರಂಗಕಲೆಗೆ ಹೊಸ ಜೀವನ, ಚೈತನ್ಯ ತುಂಬಿದ ಅವರಿಗೆ ೬೫ ತುಂಬಿದಾಗ ಧಾರವಾಡದ ಸಾಂಸ್ಕೃತಿಕ ಜಗತ್ತು 'ಲಕ್ಷ' ನೀಡಿ ಅವರ ಬಗ್ಗೆ ತೋರಿದ 'ಲಕ್ಷ್ಯ' ಅಭಿನಂದನೀಯವಾಗಿತ್ತು.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದು ಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ. ಜಿ. ಕೆ., ಕೆ. ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ–ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು
೧೦-೨-೨೦೦೧

ಸಿದ್ಧಲಿಂಗ ಪಟ್ಟಣಶೆಟ್ಟಿ
ಸಂಪಾದಕ ಸಮಿತಿಯ ಪರವಾಗಿ

## ಪರಿವಿಡಿ


| | | |
|---|---|---|
| ೧. | ಪೀಠಿಕೆ | ೯ |
| ೨. | ಹರಿಕೃಷ್ಣ ವತ್ಸಲ ಪರಂಪರೆ | ೧೦ |
| ೩. | ಆಸಕ್ತಿಯ ಹಿನ್ನೆಲೆ | ೧೦ |
| ೪. | ಅಂಕೋಲೆಯಿಂದ ಧಾರವಾಡಕ್ಕೆ | ೧೧ |
| ೫. | ಶಾಲಾಜೀವನದಲ್ಲಿ ಸಿಕ್ಕ ಪ್ರೋತ್ಸಾಹ | ೧೨ |
| ೬. | ಸಮಸ್ಯೆಗಳ ಸುಳಿಯಲ್ಲಿ | ೧೪ |
| ೭. | ತಾಯಿಯ ಅಗಲಿಕೆ | ೧೫ |
| ೮. | ವಿವಾಹ | ೧೭ |
| ೯. | ಅದೃಷ್ಟ ಪರೀಕ್ಷೆಯ ಪ್ರಯತ್ನ | ೧೭ |
| ೧೦. | ಆತಂಕದ ತೆಕ್ಕೆಯಲ್ಲಿ | ೧೮ |
| ೧೧. | ಮತ್ತೆ ಮರಳಿ ಧಾರವಾಡಕ್ಕೆ | ೧೮ |
| ೧೨. | ಸೃಜನಶೀಲ ಗಜಾನನ | ೧೯ |
| ೧೩. | ಉದರನಿಮಿತ್ತಂ ಬಹುಕೃತವೇಷಂ | ೨೦ |
| ೧೪. | ಶ್ರೀರಂಗರ ಆಶೀರ್ವಾದ | ೨೧ |
| ೧೫. | ವಿಕಾಸ ಪಥದಲ್ಲಿ | ೨೩ |
| ೧೬. | ಕಲಾಸಿದ್ಧಿ | ೨೩ |
| ೧೭. | ಪ್ರಸಾಧನ ಪ್ರಯೋಗಗಳು | ೨೪ |
| ೧೮. | ಪ್ರಸಾಧನವೂ ದೇವಪೂಜೆ | ೨೫ |
| ೧೯. | ಬಹುಮುಖಿ ಪ್ರತಿಭಾವಂತ | ೨೭ |
| ೨೦. | ಕಲಾಲೀನ ಗಜಾನನ | ೨೮ |
| ೨೧. | ಚಲನಚಿತ್ರಗಳಲ್ಲಿ ಚಲನಶೀಲ | ೨೮ |
| ೨೨. | ಅರಸಿ ಬಂದ ಪ್ರಶಸ್ತಿಗಳು | ೨೯ |
| ೨೩. | ಗಜಾನನ ಅಭಿನಂದನ | ೩೦ |
| ೨೪. | ಅದೇ ಮನ ಅದೇ ಮನೆ | ೩೦ |
| ೨೫. | ಪುತ್ರಿ ಭಾರತಿಯ ಶಬ್ದಗಳಲ್ಲಿ | ೩೧ |
| | ಅನುಬಂಧ | ೩೪ |

# ಪೀಠಿಕೆ

ಕರ್ನಾಟಕದಲ್ಲಿ ರಂಗಭೂಮಿಯಲ್ಲಿ ಪ್ರಸಾಧನ ಕಲೆ (ಮೇಕಪ್) ಕರತಲಾಮಲಕ ಮಾಡಿಕೊಂಡು ಮೇಲುಗೈ ಸಾಧಿಸಿದವರು ಬಹಳ ವಿರಳ. ದಕ್ಷಿಣ ಕರ್ನಾಟಕದಲ್ಲಿ ಮೇಕಪ್ ನಾಣಿ ಹೇಗೋ ಹಾಗೇ ಉತ್ತರ ಕರ್ನಾಟಕದಲ್ಲಿ ಪ್ರಸಾಧನ ಕಲ್ಲೆಯಲ್ಲಿ ಪ್ರಸಿದ್ಧಿ ಪಡೆದವರು ಧಾರವಾಡದ ಗಜಾನನ ಮಹಾಲೆಯವರು. ಕರ್ನಾಟಕ ನಾಟಕ ಅಕಾಡೆಮಿಯಿಂದ ಪುರಸ್ಕಾರ ಪಡೆದ ಈ ಪ್ರತಿಭಾವಂತ ಕಲಾಕಾರ ಪ್ರೀತಿ, ವಿಶ್ವಾಸ, ಮುಗ್ಧ ಮನಸ್ಸಿನಿಂದ ಕಲಾರಸಿಕರ ಹೃದಯ ಗೆದ್ದ ಸಜ್ಜನತೆಯ ಸಾಕಾರ ಮೂರ್ತಿ. ಅರವತ್ತೈದರ ಇಳಿ ವಯಸ್ಸಿನಲ್ಲಿಯೂ ಪಾದರಸದಂತೆ ಚಟುವಟಿಕೆಯುಳ್ಳ ಈ ಮಹಾನ ಕಲಾವಿದ. ಯಾವಾಗಲೂ ಕಲೋಪಾಸನೆಯ ಕೈಂಕರ್ಯವನ್ನು ಮಾಡುತ್ತಿರುವ ಧನ್ಯಜೀವಿ. ಇವರ ಜೀವನ ವೃತ್ತಾಂತವನ್ನು ಅರಿಯಬೇಕೆನ್ನುವ ಕುತೂಹಲ ನನಗೆ. ಕೇಳಿದೆ, ವಿವೇಚಿಸಿದೆ. ಅವರು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಟ್ಟಂತೆಲ್ಲ ಬೆಚ್ಚಿ ಬೀಳಿಸುವ ಘಟನಾವಳಿಗಳು, ಕರುಳು ಹಿಂಡುವ ದೃಶ್ಯಗಳ ಬದುಕಿನ ಹಾದಿಯ ಕಲ್ಲು ಮುಳ್ಳುಗಳನ್ನು ದಾಟುವಾಗ ಬಿದ್ದು, ಎದ್ದು,ಗೆದ್ದು ಬಂದ ಬಗ್ಗೆ ಕೇಳಿದಾಗ ತುಂಬ ವಿಸ್ಮಯಗೊಂಡೆ. ದೀನ ಅವಸ್ಥೆಯಿಂದ ಧನ್ಯತೆಯ ಶೃಂಗಕ್ಕೆ ಏರಿದ ರೀತಿ ವಿಸ್ಮಯಕರ !

ಪ್ರಸಾಧನ ಕಲೆ ನಾಟಕದ ಪಾತ್ರಧಾರಿಗಳಿಗೂ ವೀಕ್ಷಕರಿಗೂ ಇರುವ ಭಾವನಾತ್ಮಕ ಕೊಂಡಿ. ಎಲ್ಲ ಪಾತ್ರಗಳಿಗೆ ತನ್ನದೇ ಆದ ಆದರ್ಶಗಳಿರುತ್ತವೆ. ಪಾತ್ರಕ್ಕೆ ಅನುಗುಣವಾಗಿ ಪ್ರಸಾಧನವನ್ನು ಮಾಡುವದು, ವಿಶೇಷವಾಗಿ ಅದರಲ್ಲಿ ಪರಿಣತಿಯನ್ನು ಸಾಧಿಸುವದು ಸಾಮಾನ್ಯ ಮಾತಲ್ಲ. ವಿರೋದಾಭಾಸದ ಪ್ರಸಾಧನ ಎಂತಹ ಶ್ರೇಷ್ಠ ಕಲಾವಿದನ ಕಲೆಯನ್ನು ಕೂಡ ಅಪಭ್ರಂಶಗೊಳಿಸಬಹುದು. ಭಾವನೆಯ ಪರಕಾಷ್ಠೆಗೆ ಒಯ್ಯಲು ಪಾತ್ರಕ್ಕೆ ತಕ್ಕ ಮೇಕಪ್ ಇರಲೇಬೇಕು. ಈ ಕಾರಣದಿಂದಲೇ ಇದಕ್ಕೆ ಎಲ್ಲಿಲ್ಲದ ಮಹತ್ವ.

ಬದುಕಿನ ಜಂಜಡಗಳನ್ನು ಮರೆಯಲು ಒಬ್ಬ ವೀಕ್ಷಕ ಸಿನೆಮಾ - ನಾಟಕಗಳನ್ನು ನೋಡಲು ಹೋದಾಗ ಆತ ತನ್ನಲ್ಲಿ ಇಲ್ಲದ ಎಲ್ಲ ವಿಶೇಷಗಳನ್ನು ತಾನು ವೀಕ್ಷಿಸುತ್ತಿರುವ ಪಾತ್ರಗಳಿಂದ ಅಪೇಕ್ಷಿಸುತ್ತಿರುತ್ತಾನೆ. ರೂಪ, ಶ್ರೀಮಂತಿಕೆ, ದರ್ಪ, ಗಾಂಭೀರ್ಯ, ಕ್ರೌರ್ಯ, ಮಾತು ಮುಂತಾದವುಗಳಲ್ಲಿ ಭಾವನಾತ್ಮಕವಾಗಿ ತನ್ನನ್ನು ಆ ಪಾತ್ರಗಳೊಂದಿಗೆ ತುಲನಾತ್ಮಕವಾಗಿ ಹೋಲಿಸಿಕೊಂಡು ತಾದಾತ್ಮ್ಯತೆ ಹೊಂದಲು ಪ್ರಯತ್ನಿಸುತ್ತಿರುತ್ತಾನೆ. ಈ ಭಾವ ಬೆಸುಗೆಯ ಬಾಂಧವ್ಯಕ್ಕೆ ಪ್ರಸಾಧನ ಕಲೆಯ ಮಧ್ಯಸ್ತಿಕೆ ಬಹು ಮುಖ್ಯವಾದುದು. ಪಾತ್ರಧಾರಿಗಳ ಹಾಗೂ ವೀಕ್ಷಕರ ಭಾವನೆಗಳನ್ನು ಸರಿಯಾಗಿ ಗ್ರಹಿಸಿ ಸಮರ್ಥವಾಗಿ

ಪ್ರಸಾಧನ ಕಲೆಯಲ್ಲಿ ನಿವೇದಿಸುವದು ಬಹಳ ಕ್ಲಿಷ್ಟಕರವಾದ ಕೆಲಸ, ಇಂತಹ ಒಂದು ಅಪರೂಪವಾದ ಕಲೆಯನ್ನು ಸಿದ್ಧಿಸಿಕೊಂಡ ಗಾರುಡಿಗ ಕಲಾತಪಸ್ವಿ ಶ್ರೀ ಗಜಾನನ ಮಹಾಲೆ.

## ಹರಿಕೃಷ್ಣ ವತ್ಸಲ ಪರಂಪೆ

ಗಜಾನನ ಮಹಾಲೆಯವರು ಧಾರವಾಡದ ಕಲಾ ಗಾರುಡಿಗರೆಂದು ನಾಡಿನಗಲ ಪ್ರಸಿದ್ಧಿ ಪಡೆದಿದ್ದರೂ ಮೂಲತಃ ಅವರು ಉತ್ತರ ಕನ್ನಡ ಜಿಲ್ಲೆಯವರು. ಅಂಕೋಲೆಯ ಕಾಕನ ಮಠ ಓಣಿಯಲ್ಲಿ ಹರಿಕೃಷ್ಣ ಮಹಾಲೆ ಹಾಗೂ ವತ್ಸಲಾ ಮಹಾಲೆ ದಂಪತಿಗಳ ಪುಣ್ಯಗರ್ಭದಲ್ಲಿ ದಿನಾಂಕ ೧೪-೧-೧೯೩೭ ರಂದು ಗಜಾನನ ಮಹಾಲೆಯವರು ಜನಿಸಿದರು. ತಂದೆ ಹರಿಕೃಷ್ಣ ಮಹಾಲೆಯವರು ವೃತ್ತಿಯಿಂದ ಕ್ಷೌರಿಕರು, ಪ್ರವೃತ್ತಿಯಿಂದ ಕಲಾವಿದರು. ತಮ್ಮ ವೃತ್ತಿಯೊಡನೆ ಕರಕುಶಲತೆಯಿಂದ ಊರ ಜನರಿಂದ ಒಳ್ಳೆಯ ಹೆಸರನ್ನು ಪಡೆದಿದ್ದರು. ಅಂಕೋಲೆಯ ಶಾಂತಾದುರ್ಗಾ ಮಹಾಮಾಯಾ ದೇವಸ್ಥಾನದ ರಥದ ಶೃಂಗಾರ ಮಾಡಲು ಹರಿಕೃಷ್ಣ ಮಹಾಲೆಯೇ ಬೇಕು. ಹರಿಕೃಷ್ಣರ ಅಣ್ಣ ಪುಂಡಲೀಕ ಕರಕುಶಲ ಕಲೆಗಳನ್ನು ಸಿದ್ಧಿಸಿಕೊಂಡಿದ್ದರಲ್ಲದೇ ಯಕ್ಷಗಾನ ಕಲೆಯ ಬೆನ್ನತ್ತಿ ಆ ಭಾಗದಲ್ಲಿ ಹೆಸರುವಾಸಿಯಾಗಿದ್ದರು. ಇವರ ಹಿರಿಮಗ ನಾಗಪ್ಪ ಮಣ್ಣಿನ ವಿಗ್ರಹಗಳ ತಯಾರಿಕೆಯಲ್ಲಿ ನಿಷ್ಣಾತರಾಗಿದ್ದರು. ಹೀಗೆ ಗಜಾನನ ಮಹಾಲೆಯವರಿಗೆ ಬಾಲ್ಯದಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಮನೆಯಲ್ಲಿ ಪೂರಕ ವಾತಾವರಣವನ್ನು ದೈವವೇ ಒದಗಿಸಿಕೊಟ್ಟಿತ್ತು. ಚಿಕ್ಕಪ್ಪ ವಾಸುದೇವ, ಅಪ್ಪ ಹರಿಕೃಷ್ಣ, ದೊಡ್ಡಪ್ಪಂದಿರಾದ ಪುಂಡಲೀಕ, ಸುಬ್ಬ, ನಾಗಪ್ಪ ಬಾಲಕ ಗಜಾನನನನ್ನು ತಿದ್ದಿ ತೀಡಿದರು. ಯಕ್ಷಗಾನದ ಒಡನಾಟ, ಬಾಸಿಂಗ ರಚನೆ, ನಾಟಕ ಕಂಪನಿಯಲ್ಲಿ ಪಾತ್ರ ನಿರ್ವಹಣೆ ಮುಂತಾದ ಕಲಾ ವಿಭಾಗಗಳಲ್ಲಿ ಪಳಗಿಸಿ ಕಲೆಯ ಮೋಹಪಾಶದಲ್ಲಿ ಕೆಡವಿದರು. ಇವುಗಳೆಲ್ಲದರ ಜೊತೆಗೆ ಪೂರಕವಾಗಿ ಕುಲ ಕಸುಬಾದ ನಾಪಿತ ವೃತ್ತಿಯು ಬಾಲಕ ಗಜಾನನನಲ್ಲಿ ಮೊದಲಿನಿಂದ ಹುದುಗಿದ್ದ ಸುಪ್ತ ಪ್ರತಿಭೆಯನ್ನು ಬಡಿದೆಬ್ಬಿಸಿದವು. ಕೂದಲು ಕತ್ತರಿಸುವ ಕತ್ತರಿ, ದಾಡಿ ಬೋಳಿಸುವ ಬ್ರಶ್ಶು ಮುಖದ ಚೆಲುವನ್ನು ಒಡಮೂಡಿಸುವ ಗತ್ತುಗಾರಿಕೆ, ಅನುಸಂಧಾನ ಗಜಾನನನಿಗೆ ತಾನೇ ತಾನಾಗಿ ಸಿದ್ಧಿಸಹತ್ತಿತು.

## ಆಸಕ್ತಿಯ ಹಿನ್ನೆಲೆ

ಗುಬ್ಬಿ ವೀರಣ್ಣನವರ 'ಗುಬ್ಬಿ ಥಿಯಟ್ರೀಕಲ್ ಕಂಪನಿ'ಯಲ್ಲಿ ದೊಡ್ಡಪ್ಪ ಹಾಸ್ಯ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಅವರು ಕಂಪನಿಯೊಂದಿಗೆ ನಾಡಿನುದ್ದಕ್ಕೂ ಸುತ್ತಿ ಮೇಕಪ್ ಕಲೆಯನ್ನು ಕರಗತ ಮಾಡಿಕೊಂಡಿದ್ದರು. ಜೊತೆಗೆ ನಾಟಕದ ಇತರ ಆಯಾಮಗಳಾದ ವೇಷಭೂಷಣ, ಸಂಭಾಷಣೆ, ಸಂಗೀತಗಳಲ್ಲಿ ಕೂಡ ಪರಿಣತಿಯನ್ನು

ಹೊಂದಿ ಉತ್ತಮ ಕಲಾವಿದರೆಂದು ಪ್ರಸಿದ್ಧರಾಗಿದ್ದರು. ವೃತ್ತಿ ರಂಗಭೂಮಿಯಲ್ಲಿ ಕಲಾವಿದರು ತಮ್ಮ ಮುಖಕ್ಕೆ ಮೈ ಕೈಗೆ ಬಣ್ಣ ಬಳಿದುಕೊಳ್ಳುವದನ್ನು ಅಭಿನಯದೊಡನೆ ಮಾಡುತ್ತಿದ್ದರು. ಇವರೊಡನೆಯ ಒಡನಾಟ ಬಾಲಕ ಗಜಾನನನಿಗೆ ನಾಟಕ ಕಲೆಯ ವಿವಿಧ ಪ್ರಕಾರಗಳ ಬಗ್ಗೆ ಹೆಚ್ಚು ಕುತೂಹಲದಿಂದ ವೀಕ್ಷಿಸಿ ಆಸಕ್ತಿ ವಹಿಸುವಂತೆ ಮಾಡಿದವು.

ಅಂಕೋಲೆಯಲ್ಲಿ ಮೂರನೆಯ ಇಯತ್ತೆ ಓದುತ್ತಿರುವಾಗಲೆ ಗಜಾನನನು ನಾಟಕ, ಯಕ್ಷಗಾನ, ಕುಲಕಸುಬಾದ ನಾಪಿತ ವೃತ್ತಿಯನ್ನು ಸಹ ಕಲಿಯತೊಡಗಿದ. ಮನೆಯ ಹಿರಿಮಗ ಗಜಾನನನಲ್ಲಿದ್ದ ಕಲಾಪ್ರೇಮವನ್ನು ಕಂಡು ಹರ್ಷಗೊಂಡು ಆತನ ಉತ್ಸಾಹವನ್ನು ವೃದ್ಧಿಸುತ್ತಿದ್ದರು. ಗಜಾನನ ದಿನ ದಿನಕ್ಕೂ ಪುಟಕ್ಕಿಟ್ಟ ಚಿನ್ನದಂತೆ ಹಿರಿಯರು ಕಲಿಸುತ್ತಿದ್ದ ವಿದ್ಯೆಗಳನ್ನು ಆಸ್ಥೆಯಿಂದ ಕಲಿಯುತ್ತ ಪ್ರವರ್ಧಮಾನಕ್ಕೆ ಬರಹತ್ತಿದ್ದ.

ಅವು ಸ್ವಾತಂತ್ರ್ಯಪೂರ್ವ ಕಾಲದ ದಿನಗಳು. ಕಲಾ ಹೃದಯವುಳ್ಳ ಮಹಾಲೆ ಕುಟುಂಬಕ್ಕೆ ಈ ಸೆಳೆತದಿಂದ ಹೊರತಾಗಿರಲು ಸಾಧ್ಯವೇ ಇರಲಿಲ್ಲ. ದೊಡ್ಡಪ್ಪ ಪುಂಡಲೀಕ ಮಹಾಲೆ ಗಾಂಧೀಜಿಯವರ ಮೋಡಿಗೆ ಒಳಗಾಗಿ ಉಪ್ಪಿನ ಸತ್ಯಾಗ್ರಹದಲ್ಲಿ ಧುಮುಕಿದರು. ಇದೇ ಸಂದರ್ಭದಲ್ಲಿ ಗಜಾನನನಿಗೆ ಗಾಂಧೀಜಿಯವರನ್ನು ಸನಿಹದಿಂದ ನೋಡುವ ಭಾಗ್ಯ ಸಿಕ್ಕಿತು. ಮಹಾಲೆ ಕುಟುಂಬ ಕಲಾಪ್ರೇಮವನ್ನಲ್ಲದೇ ದೇಶ ಪ್ರೇಮವನ್ನು ಪ್ರದರ್ಶಿಸಿ ಧನ್ಯವಾಗಿದೆ.

## ಅಂಕೋಲೆಯಿಂದ ಧಾರವಾಡಕ್ಕೆ

ಮಹಾಲೆ ಕುಟುಂಬ ಹಿರಿದಾದ್ದರಿಂದ ಹೊಟ್ಟೆ ಹೊರೆಯುವ ಪ್ರಶ್ನೆ ಕಾಡುತ್ತಿತ್ತು. ಮನೆಯಲ್ಲಿ ಎಲ್ಲರೂ ದುಡಿಯುವದು ಅನಿವಾರ್ಯವಾಗಿತ್ತು. ಅಂಕೋಲೆಯ ಮಹಾಮಾಯಾ ದೇವಸ್ಥಾನದಲ್ಲಿ ಗಜಾನನನ ಅಜ್ಜಿ ಕೆಲಸಕ್ಕೆ ಹೋಗುತ್ತಿದ್ದಳು. ಜೊತೆಗೆ ತಮ್ಮಣ್ಣ ಭಟ್ಟ ಎನ್ನುವವರ ಮನೆ ಕೆಲಸಕ್ಕೂ ಹೋಗುತ್ತಿದ್ದರು. ತಮ್ಮಣ್ಣ ಭಟ್ಟರ ಸಂಬಂಧಿಕರು ಧಾರವಾಡದಲ್ಲಿದ್ದರು. ಹರಿಕೃಷ್ಣರ ಕ್ಷೌರಿಕ ವೃತ್ತಿ ಅವರ ಮನ ಸೆಳೆದಿದ್ದವು. ಧಾರವಾಡಕ್ಕೆ ಬಂದು ಬಿಡಿರಿ, ನಾನು ಎಲ್ಲ ವ್ಯವಸ್ಥೆ ಮಾಡುತ್ತೇನೆ ಎಂದು ತಮ್ಮಣ್ಣ ಭಟ್ಟರು ಆಶ್ವಾಸನೆ ನೀಡಿ ಕರೆದಾಗ ೧೯೪೪ ರ ಸುಮಾರು ಮಹಾಲೆ ಕುಟುಂಬ ಧಾರವಾಡಕ್ಕೆ ಬಂದಿತು.

ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾಗಿದ್ದ ಫ್ಯಾರೆನ್ ಅವರ ಔಟ್ ಹೌಸ್‌ನಲ್ಲಿ ಮಹಾಲೆ ಕುಟುಂಬಕ್ಕೆ ತಂಗಲು ವ್ಯವಸ್ಥೆ ಮಾಡಿದರು. ಮುಂದೆ ಪ್ರಾಚಾರ್ಯರಾದ ಆರ್ಮಾಂಡೊ ಮೆನೆಜಿಸ್ ಕೂಡ ಉದಾರತೆಯಿಂದ ವರ್ತಿಸಿದರು. ಕೊಂಕಣಿಯಲ್ಲಿ ಮಾತನಾಡುತ್ತ ಆತ್ಮೀಯತೆ ತೋರಿದರು. ಆದರೆ ಹೊಸದೊಂದು ಸಮಸ್ಯೆ ಎದುರಾಯಿತು. ಔಟ್ ಹೌಸ್ ವಾರ್ಡನ್‌ಗಳ ಕಿರಿಕಿರಿ ಹೆಚ್ಚಾಯಿತು. ಆಗ ಮಹಾಲೆ ಕುಟುಂಬ ಅಲ್ಲಿಂದ ನಿರ್ಗಮಿಸಿ ಧಾರವಾಡದ ಅಂಜುಮನ್ ಶಾಲೆಯ ಆವರಣದಲ್ಲಿ ಒಂದು ಅಂಗಡಿಯನ್ನು

ಭಾಡಿಗೆಯಿಂದ ಪಡೆದರು. 'ಕಾರವಾರ ಮೆಜೆಸ್ಟಿಕ್ ಹೇರ್ ಕಟಿಂಗ್ ಸಲೂನ್' ಎಂಬ ಹೆಸರಿನ ಕ್ಷೌರದ ಅಂಗಡಿಯನ್ನು ತೆರೆದರು. ಜೊತೆಗೆ ಕಿಲ್ಲಾದಲ್ಲಿ ವಾಸಿಸಲು ಮನೆಯೊಂದನ್ನು ಭಾಡಿಗೆಗೆ ಹಿಡಿದರು. ಸಂಸಾರ ರಥ ಮತ್ತೆ ಸುಗಮವಾಗಿ ಓಡಲು ಪ್ರಾರಂಭಿಸಿತು. ಗಜಾನನನ ಓದು ಬಾಸೆಲ್ ಮಿಶನ್ ಶಾಲೆಯಲ್ಲಿ ಮುಂದುವರಿಯಿತು. ಆಗ ಬಾಸೆಲ್ ಮಿಶನ್ ಶಾಲೆಯು ಗಾಂಧೀ ಚೌಕದ ದತ್ತಮಂದಿರದ ಬಳಿ ಎಡಭಾಗದಲ್ಲಿ ಇತ್ತು. ಗಜಾನನ ಓದಿನೊಂದಿಗೆ ತಂದೆಯ ಸಲೂನಿಗೂ ಹೋಗಿ ಸಹಕರಿಸುತ್ತ ತಂದೆ-ತಾಯಿಯವರ ವಾತ್ಸಲ್ಯದ ಮಗನಾಗಿ ಅಭ್ಯಾಸವನ್ನು ಮುಂದುವರಿಸಿದ.

ಇದೇ ವೇಳೆಗೆ ಗಜಾನನನ ಜೀವನದಲ್ಲಿ ಹೊಸದೊಂದು ತಿರುವು ಬಂತು. ರಾಮರಾವ ಕುಲಕರ್ಣಿ (ರಾಮಣ್ಣ ಮಾಸ್ತರು) ಇವರ ಪರಿಚಯವಾಯಿತು. ರಾಮರಾವ ಅವರು ಗಜಾನನನಿಗೆ ಗುರುವಾಗಿ ಒದಗಿ ಬಂದು ಹಾರ್ಮೋನಿಯಂ ಕಲಿಸತೊಡಗಿದರು. ಹಾರ್ಮೋನಿಯಂ ಬಾರಿಸುವದನ್ನು ಕಲಿಯುವದರ ಜೊತೆಗೆ ಹಾಡುವದನ್ನು ಕೂಡ ಕಲಿಸಿದರು. ಇದು ಗಜಾನನನಿಗೆ ಸಂಗೀತಾಭ್ಯಾಸವನ್ನು ಮಾಡುವರೊಂದಿಗೆ ಶಾಲೆಯ ಸಮಾರಂಭಗಳಲ್ಲಿ ಮಿಂಚುವ ಅವಕಾಶವನ್ನು ಕಲ್ಪಿಸಿತು. ರಾಮರಾವ ಕುಲಕರ್ಣಿಯವರು ಧಾರವಾಡ ಆಕಾಶವಾಣಿ ಕೇಂದ್ರದ ನಿರ್ದೇಶಕ ವೆಂಕಟೇಶ ಗೋಡಖಿಂಡಿಯವರ ಜನಕ ತಂದೆ.

## ಶಾಲಾಜೀವನದಲ್ಲಿ ಸಿಕ್ಕ ಪ್ರೋತ್ಸಾಹ

ಗಜಾನನನಿಗೆ ಒಂದಿಲ್ಲೊಂದು ರೀತಿಯಲ್ಲಿ ಕಲಾಸೇವೆಯಲ್ಲಿ ನಿರತವಾದ ಮನೆಯ ವಾತಾವರಣಕ್ಕೆ ಪುಟ ಕೊಟ್ಟಂತೆ ಶಾಲಾ ವಾತಾವರಣ ನಿರ್ಮಾಣ ಮಾಡಿತು. ಕಲಾಪ್ರೇಮ ಬೆಳೆಸಿಕೊಂಡು ತನ್ನನ್ನು ಕಲಾಸೇವೆಗೆ ಅರ್ಪಿಸಿಕೊಳ್ಳುವ ಬಯಕೆಯನ್ನು ಹೆಚ್ಚಿಸಿತು. ಹಾರ್ಮೋನಿಯಂ ನುಡಿಸುವದನ್ನು ಬಹು ಬೇಗನೆ ಕಲಿತುಕೊಂಡನು. ಆದರೆ ಮತ್ತೊಂದು ಸಮಸ್ಯೆ ಇತ್ತು. ಗಜಾನನನಿಗೆ ಮಾತನಾಡುವಾಗ ಸ್ವಲ್ಪ ತಡವರಿಸುತ್ತಿತ್ತು. ಇದರಿಂದ ಶಾಲೆಯಲ್ಲಿ ನಾಟಕದ ಪಾತ್ರಗಳನ್ನು ಮಾಡುವಾಗ ಉಚ್ಚಾರ ಸ್ಪಷ್ಟವಿಲ್ಲವೆಂದು ಕಾರಣ ಕೊಟ್ಟು ನಿರಾಕರಿಸಲಾಗುತ್ತಿತ್ತು. ಗಜಾನನನಿಗೆ ಇದೊಂದು ಅಸಹನೀಯವಾದ ಕಾರಣವಾಗಿ ಬಹಳ ಚಡಪಡಿಸಿದ. ಸಂಕೋಚದಿಂದ ಬದಿಗೆ ಸರಿಯುವದು ಅನಿವಾರ್ಯವಾಯಿತು. ಆದರೆ ಕಲೆಯೇ ಜೀವಾಳವಾಗಿರುವ ಆತನ ತಂದೆ ತಾಯಿ ಬಂಧು ವರ್ಗದವರು ಆತನಲ್ಲಿದ್ದ ಅವ್ಯಕ್ತ ಕಲೆಯನ್ನು ಗುರುತಿಸಿ ಉತ್ಸಾಹ ತುಂಬುತ್ತಿದ್ದರು. ತಂದೆ ಕುಲ ಕಸಬು ಬಿಡದೆ, ನಾವು ಏನೆಲ್ಲ ಕಲಿಯಲು ಸಾಧ್ಯವೋ ಅದನೆಲ್ಲ ಕಲಿಯಬೇಕು, ಧಾರವಾಡಕ್ಕೆ ಬಂದು ಸೇರಿದ್ದಾಗಿದೆ. ಇಲ್ಲಿ ದೊಡ್ಡವರು ಬಹಳ ಮಂದಿ ಇದ್ದಾರೆ. ಅವರ ಮಧ್ಯೆ ನಾವು ದಡ್ಡರಾಗಬಾರದು. ನಾವು ನಮ್ಮ ವಿಶ್ವಾಸವನ್ನು ಕಳೆದುಕೊಳ್ಳದೇ ಮುನ್ನಡೆಯಬೇಕು.

ನಮ್ಮ ಪಾಲಿಗೂ ಒಳ್ಳೆಯ ಕಾಲ ಬಂದೇ ಬರುತ್ತದೆ. "ಗಜೂ .......... ತೂ ಪ್ರಯತ್ನ ಕೆಲ್ಲರಿ. ದೇವ್ರೋ ಪ್ರತಿಫಲ ದಿತರೆ.........." ಎಂದು ಮಗನಲ್ಲಿ ಜೀವನೋತ್ಸಾಹ ತುಂಬುತ್ತಿದ್ದರು. ಇಂಥ ಸವಿಮಾತುಗಳನ್ನು ಕೇಳಿ ಯಾವುದೋ ಒಂದು ಭವ್ಯ ಕನಸು ಬಹು ದೂರದಿಂದ ಬಂದು ಆತನ ಅಂತರಂಗದಲ್ಲಿ ಬೆಸೆದುಕೊಂಡ ಹಾಗೆ ಆಗುತ್ತಿತ್ತು.

ಬಾಸೆಲ್ ಮಿಶನ್ ಟೌನ್ ಶಾಲೆಯಲ್ಲಿ ಕಲಾ ಪ್ರದರ್ಶನದ ಅವಕಾಶ ದೊರೆತಾಗ ತಂದೆ ಹರಿಕೃಷ್ಣರಿಗೆ ಮುಖಕ್ಕೆ ಬಣ್ಣ ಹಚ್ಚುವ ಕಲೆಯನ್ನು ವೃದ್ಧಿಸಿಕೊಂಡರು. ತಂದೆಯ ಜೊತೆ ಮಗನೂ ಸಹ ಪಳಗತೊಡಗಿದ. ವರದರಾಜ ಹುಯಿಲಗೋಳ ಮಾಸ್ತರರು, ದೀಕ್ಷಿತ ಮಾಸ್ತರರು, ಶ್ರೀಖಂಡೆ ಮಾಸ್ತರರು ಪರಿಚಿತರಾಗಿ ತುಂಬ ಸಹಕಾರ, ಸಲಹೆಗಳನ್ನು ನೀಡತೊಡಗಿದರು. ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಸಹಯೋಗದಲ್ಲಿ ನಡೆದ ವಾರ್ಷಿಕ ಸಮಾರಂಭದಲ್ಲಿ 'ಭಕ್ತ ಪ್ರಹ್ಲಾದ' ನಾಟಕಕ್ಕೆ ಮೇಕಪ್ ಮಾಡಲು ಹರಿಕೃಷ್ಣ ಮಹಾಲೆಯವರಿಗೆ ಕರೆ ಬಂದಾಗ ಮಗನೂ ಕೂಡ ತಂದೆಗೆ ನೆರವಾದನು. ಆಗ ಅವನಿಗೆ ಕೇವಲ ಹದಿಮೂರು ವಯಸ್ಸು. ಗಜಾನನ ಏಳನೆಯ ತರಗತಿಯಲ್ಲಿ ಓದುತ್ತಿದ್ದಾಗ 'ತುಜಾಹಿ ತುಜಾ ಪಾಸಿ' ಮರಾಠೀ ನಾಟಕ ಆಡಿಸಿದರು. ಅದಕ್ಕೂ ತಂದೆ ಮಗ ಜೊತೆಯಾಗಿ ಮೇಕಪ್ ಮಾಡಿದ್ದರು. ಮಗನ ಕೈಚಳಕ ಕಂಡು ಖುಶಿಯಿಂದ ಹರಿಕೃಷ್ಣ ಬಹಳ ಮೆಚ್ಚಿಕೊಂಡು ಶಹಬ್ಬಾಶ್‌ಗಿರಿ ನೀಡಿದರು, ಗಜೂ ......... 'ದೇವ್ ತುಕ್ ಬರೆ ಕರೂಂ' ....... ಅಂತ ಮನಸ್ಸು ತುಂಬಿ ಹರಸಿದರು.

ತಂದೆ ಮಗನಿಗೆ ಹುಯಿಲಗೋಳ ಮಾಸ್ತರರು, ಶ್ರೀಖಂಡೆ ಮಾಸ್ತರರು, ದೀಕ್ಷಿತ ಮಾಸ್ತರರು, ರಾಮರಾವ ಕುಲಕರ್ಣಿಯವರು ಪ್ರಸಾಧನ ಕಲೆಯಲ್ಲಿ ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಟ್ಟು, ಪ್ರೋತ್ಸಾಹ ನೀಡುತ್ತಿದ್ದರು. 'ರಾಮನ ವನವಾಸ' ಹಾಗೂ 'ಏಕಲವ್ಯ' ನಾಟಕಗಳ ಪ್ರಸಾಧನದ ಹೊಣೆ ಹೊರೆಸಿದರು. ತಂದೆಯ ಅನುಭವ, ಮಾರ್ಗದರ್ಶನದ ಜೊತೆಗೆ ಮಗನಿಗೆ ಕಲಿಯುವ ಅದಮ್ಯ ಉತ್ಸಾಹ. ತಂದೆ ಗುರುವಾಗಿ ಪ್ರತಿ ಹಂತದಲ್ಲೂ ಗಜಾನನನಿಗೆ ಸೂಕ್ತ ನಿರ್ದೇಶನ ನೀಡುತ್ತಿದ್ದರು. ಪ್ರತಿಯೊಂದು ನಾಟಕ ತಂದೆ ಮಕ್ಕಳ ಕೈಚಳಕದಿಂದ ಹೊಸ ರೂಪ ಪಡೆದುಕೊಂಡು ಕಲಾ ರಸಿಕರ ಮನ ಸೂರೆಗೊಳ್ಳುತ್ತಿದ್ದವು. ತಂದೆಯ ದಿಗ್ದರ್ಶನ ಹಾಗೂ ಆಶೀರ್ವಾದದಿಂದ ಗಜಾನನ ಹದಿಮೂರನೆಯ ವಯಸ್ಸಿನಲ್ಲೇ ಪ್ರಸಾಧನ ಕಲೆಯಲ್ಲಿ ಪರಿಣತಿ ಹೊಂದಿದನು.

ಪ್ರಸಾಧನ ಕಲೆಗೆ ಸಿಗುವ ಸಂಭಾವನೆ ಬಹಳ ಕಡಿಮೆ. ಬಡತನದ ಬೇಗೆಯಲ್ಲಿ ಕುದಿಯುತ್ತಿದ್ದರೂ ತಂದೆ-ಮಕ್ಕಳು ಅದನ್ನೊಂದು ಕಲಾ-ಸೇವೆಯೆಂದು ಶ್ರದ್ಧಾಪೂರ್ವಕವಾಗಿ ಮಾಡುತ್ತಿದ್ದರು. ಮೇಣದ ಬತ್ತಿ ತಾನು ಸುಟ್ಟು ಪರರಿಗೆ ಹೇಗೆ ಬೆಳಕನ್ನು ನೀಡುತ್ತದೆಯೋ ಹಾಗೆಯೇ ಕಲಾಕಾರರ ಜೀವನ. ಸಮಾಜದ ನ್ಯೂನತೆಗಳನ್ನು

ಎತ್ತಿ ತಂದು ಸರಿ ದಾರಿಗೆ ತರುವದೇ ಅವರ ಜೀವನ. ಯಾವದೇ ಕಲಾಕಾರನಿಗೆ ಸಿಗುವ ಸಂಭಾವನೆ ಬಹಳ ಕಡಿಮೆ. ಕಲಾಸೇವೆಯೊಂದನ್ನೇ ಮಾಡಿ ಜೀವನೋಪಾಯ ಮಾಡುವವರ ಜೀವನ ಅತಂತ್ರವಾದದ್ದು ಹಾಗೂ ಅಭದ್ರತೆಯಿಂದ ಕೂಡಿದ್ದು ಇರುತ್ತದೆ. ಮನೆತನದಿಂದ ಸ್ಥಿತಿವಂತರಿಂದ್ದವರು ಹೇಗೋ ಜೀವನ ಸಾಗಿಸಬಹುದು. ಆದರೆ ಕಲೆಯನ್ನೇ ನಂಬಿ ಯಶಸ್ಸು ಕಂಡವರು ಬಹಳ ಕಡಿಮೆ. ಆದರೆ ನಿಜವಾದ ಕಲಾಕಾರ ಜೀವನದ ಜಂಜಡಗಳಿಗೆ ಹೆಚ್ಚು ಲಕ್ಷ್ಯವಹಿಸದೇ ಕಲೆಗಾಗಿಯೇ ತಮ್ಮನ್ನು ಮುಡಿಪಾಗಿಟ್ಟುಕೊಳ್ಳುತ್ತಾರೆ. ಅಂತಹ ಅಪರೂಪದ ಕಲಾಸೇವಕರಾಗಿದ್ದರು. ಗಜಾನನ ಮಹಾಲೆಯವರ ಕುಟುಂಬದ ಸದಸ್ಯರು.

## ಸಮಸ್ಯೆಗಳ ಸುಳಿಯಲ್ಲಿ

ಹರಿಕೃಷ್ಣ ಮಹಾಲೆಯವರದು ಏಳು ಜನ ಸದಸ್ಯರನ್ನೊಳಗೊಂಡ ದೊಡ್ಡ ಕುಟುಂಬ. ಆದರೆ ಮನೆಯಲ್ಲಿ ದುಡಿಯುವ ಕೈ ಒಂದು. ಕಿತ್ತು ತಿನ್ನುವ ಬಡತನ. ಹಸಿವೆಗೆ ಭಾವನೆಗಳುಂಟೇ ? ಆಹಾರವೊಂದನ್ನು ಬಿಟ್ಟು ಬೇರೆ ಯಾವ ವಸ್ತುವಿನಿಂದಲೂ ಹೊಟ್ಟೆಯನ್ನು ಸಂಭಾಳಿಸಲಾಗದು. ಹರಿಕೃಷ್ಣರೊಬ್ಬರ ದುಡಿಮೆ ಸಾಲದಾಯಿತು. ಹೆಂಡತಿಯಲ್ಲದೆ ಮೋಹನ, ಗಜಾನನ, ಸುಶೀಲಾ, ಪ್ರೇಮಾನಂದ, ಶಾಲಿನಿಯವರನ್ನೊಳಗೊಂಡ ಕುಟುಂಬ. ಹರಿಕೃಷ್ಣ ಮಹಾಲೆಯವರದು ದಿನದ ದುಡಿಮೆ. ಮನೆತನ ನಡೆಸಲು ಸಾಕಾಗದು. ಮನೆಯ ಪರಿಸ್ಥಿತಿ ಅದರಲ್ಲೂ ಹಣಕಾಸಿನ ಮುಗ್ಗಟ್ಟು ಗಜಾನನನಿಗೆ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನು ನೀಡುವದಕ್ಕೆ ಅನಿವಾರ್ಯವಾಗಿತ್ತು. ಸೋತ ತಂದೆ ಹರಿಕೃಷ್ಣರು 'ಓದು ಕಲಿತಿದ್ದು ಸಾಕು, ದುಡಿಮೆಯ ದಾರಿ ಹುಡುಕು. ಅಂಗಡಿಯಲ್ಲಿ ಕೂಡು, ಗಿರಾಕಿಗಳಿಗೆ ತೊಂದರೆಯಾಗದಿರಲಿ ದುಡಿಮೆಯೇ ದೇವರು, ದುಡಿದರೆ ಮಾತ್ರ ಹೊಟ್ಟೆಗೆ ಗಂಜಿ, ಬಟ್ಟೆ ದಕ್ಕೀತು' ಎಂದು ಹೇಳಿದರು. ಗಜಾನನನು ಪರಿಸ್ಥಿತಿಯ ಕರೆಗೆ ಓಗೊಟ್ಟು, ವಿದ್ಯಾರ್ಥಿ ಜೀವನಕ್ಕೆ ವಿದಾಯ ಹೇಳಿದ. ಉದ್ಯೋಗಾರ್ಥಿಯಾಗಿ ತಂದೆಗೆ ಸಹಕರಿಸತೊಡಗಿದ. ವಿದ್ಯಾರ್ಜನೆ ನಿಂತು ಧನಾರ್ಜನೆಗೆ ಸಿದ್ಧತೆ ನಡೆಯಿತು. ಗಜಾನನ ತಾನು ನಂಬಿದ ಕಲಾದೇವಿ ಕೈ ಬಿಡಲಾರದೆಂಬ ಅಚಲ ವಿಶ್ವಾಸದಿಂದ ಮುನ್ನಡೆದ.

ಇದೇ ಸಮಯದಲ್ಲಿ ಪರೀಕ್ಷಿಸುವಂತೆ ದೊಡ್ಡಪ್ಪ ಪುಂಡಲೀಕ ಮಹಾಲೆಯವರ ಮಕ್ಕಳು ಕೂಡ ಓದು ಕಲಿಯಲು ಧಾರವಾಡಕ್ಕೆ ಬಂದರು. ಹರಿಕೃಷ್ಣರದು ಅವಿಭಕ್ತ ಕುಟುಂಬ. ಅವಿಭಕ್ತ ಕುಟುಂಬದಲ್ಲಿ ಸುಖ ದುಃಖಗಳನ್ನು ಸಮನಾಗಿ ಹಂಚಿಕೊಳ್ಳು ಬೇಕಲ್ಲವೇ. ಸ್ವಲ್ಪ ಭೇದ ಭಾವ ತೋರಿಸಿದರೂ ಕೂಡ ಅದರ ಅಡಿಪಾಯಕ್ಕೇ ಪೆಟ್ಟು. ಹೀಗಾಗಿ ಅಂಥ ಪರಿಸ್ಥಿಯಿದ್ದರೂ ಕೂಡ ಅಣ್ಣನ ಮಕ್ಕಳನ್ನು ಹೃತ್ಪೂರ್ವಕವಾಗಿಯೇ

ಸ್ವಾಗತಿಸಿದರು. ಗಜಾನನನಿಗೆ ತನ್ನ ಓದಿನ ಬಗ್ಗೆ ಮತ್ತೊಮ್ಮೆ ವಿಚಾರಿಸಲೂ ಕೂಡ ಆಗದ ರೀತಿಯಲ್ಲಿ ಮನೆಯ ವಾತಾವರಣ ನಿರ್ಮಾಣವಾಯಿತು. ಮೊದಲೇ ಸಮಸ್ಯೆಗಳ ಸರಮಾಲೆಯಲ್ಲಿ ಸಿಲುಕಿಕೊಂಡಿದ್ದ ಕುಟುಂಬಕ್ಕೆ ಇದೊಂದು ಹೊರಲಾರದ ಹೊರೆಯಾಯಿತು. ಹರಿಕೃಷ್ಣರು ನಿರ್ಲಿಪ್ತ ಭಾವನೆಯಿಂದ ಬಂದದ್ದನ್ನು ಸ್ವೀಕರಿಸಿದರು.

ಗಜಾನನನಿಗೆ ಆಗ ತಾನೆ ಸಂಸಾರದ ಬಗ್ಗೆ ತಿಳಿವಳಿಕೆ ಮೂಡಲು ಆರಂಭವಾಗಿತ್ತು. ಹಣಕಾಸಿನ ಅಡಚಣೆ, ಮನೆ ಪರಿಸ್ಥಿತಿ, ತಂದೆಯ ಅಸಹಾಯಕತೆ ಮುಂತಾದವುಗಳು ಜೀವನವೆಂದರೇನು ಎಂದು ಗಜಾನನ ತಿಳಿಯುವ ಮೊದಲೇ ಜೀವನ ದರ್ಶನವನ್ನು ಮಾಡಿಸಿದವು. ಮನೆಯ ಜವಾಬ್ದಾರಿಯನ್ನು ತಂದೆಯೊಡನೆ ಹೊರುವ ಅನಿವಾರ್ಯ ಪ್ರಸಂಗ. ಕ್ಷೌರದ ಅಂಗಡಿಯಲ್ಲಿ ಕೆಲಸ, ಪ್ರಸಾಧನ ಮಾಡುವ ಕೆಲಸ, ಚಿಕ್ಕವನಿದ್ದಾಗ ಕಲಿತ ಬಾಸಿಂಗ ಕಟ್ಟುವ ಕಲೆ ಮುಂತಾದವುಗಳು ಜೀವನ ನಿರ್ವಹಣೆಗೆ ಅನುಕೂಲವಾದವು. ಜೊತೆಗೆ ಕಲೆಯ ಉಪಾಸನೆಯನ್ನು ಮಾಡುತ್ತಿದ್ದ. ಆದರೆ ಮನೆತನ ನಡೆಸಲು ಯಾವದೂ ಸಾಕಾಗುತ್ತಿರಲಿಲ್ಲ. ಮನುಷ್ಯ ಯಾವ ನಾಟಕವನ್ನಾದರು ಆಡಿ ಗೆಲ್ಲಬಹುದು. ಆದರೆ ಹಣದ ನಾಟಕವನ್ನಾಡುವದು ಅಸಾಧ್ಯ. ಹಣವೇ ಸರ್ವಸ್ವವಲ್ಲದಿದ್ದರೂ ಕನಿಷ್ಠ ಪಕ್ಷ ಜೀವನ ನಿರ್ವಹಣೆಗಂತೂ ಬೇಕಲ್ಲವೆ, ಸಂಸಾರದ ಜವಾಬ್ದಾರಿ, ಅನಿಶ್ಚಿತ ಆದಾಯ ತಂದೆ ಮಕ್ಕಳನ್ನು ಇಕ್ಕಟ್ಟಿಗೆ ಸಿಲುಕಿಸಿದವು. ಬಿರುಗಾಳಿಗೆ ಸಿಲುಕಿದ ತರಗೆಲೆಯಂತೆ ಮಹಾಲೆ ಕುಟುಂಬದ ಪರಿಸ್ಥಿತಿ. ಹೇಗೋ ದಿನ ತಳ್ಳುತ್ತಿದ್ದರು. ಸಾಕವ್ವ ಹುಬ್ಬಳ್ಳಿ-ಧಾರವಾಡ ನಮ್ಮ ಹಳ್ಳಿ ಊರೆ ನಮ್ಮ ಪಾಡ ಎಂಬ ಆನಂದಕಂದರ ಕವಿತೆಯಂತೆ ಮನೆ ಪರಿಸ್ಥಿತಿಯಾಯಿತು.

## ತಾಯಿಯ ಅಗಲಿಕೆ

೧೯೫೫ ರಲ್ಲಿ ತಾಯಿ ವತ್ಸಲಾ ಕೊನೆಯುಸಿರೆಳೆದಾಗ ಗಜಾನನನಿಗೆ ಸಹಿಸಲಾಗದ ಆಘಾತ. ತಂದೆ ಹರಿಕೃಷ್ಣ ದಿಗ್ಭ್ರಾಂತರಾದರು. ಚಿಕ್ಕ ಮಕ್ಕಳೇ ತುಂಬಿರುವ ಸಂಸಾರ. ಹಸಿದ ಮಕ್ಕಳಿಗೆ ಉಣ ಬಡಿಸಲು ಯಾರೂ ಇಲ್ಲದ ಪರಿಸ್ಥಿತಿ. ಹಿರಿಯರ ಮಾತಿಗೆ ಕಟ್ಟು ಬಿದ್ದು ದಿವಂಗತ ಪತ್ನಿ ವತ್ಸಲಾಳ ತಂಗಿ ಸುಮಿತ್ರಾಳನ್ನು ಮಕ್ಕಳ ಯೋಗಕ್ಷೇಮ ನೋಡಿಕೊಳ್ಳಲು ಮರುಮದುವೆಯಾದರು. ಸುಮಿತ್ರಾಳಿಂದ ಮತ್ತು ಆರು ಜನ ಮಕ್ಕಳು. ಒಂದು ಚಿಕ್ಕ ಮನೆಯಲ್ಲಿ ಹದಿಮೂರು ಮಂದಿ ಜತೆಗೂಡಿ ಬಾಳರಥದಲ್ಲಿ ಪಯಣಿಸತೊಡಗಿದರು. ಕನಸು ಹೆಣೆಯತೊಡಗಿದರು. ದುಡಿಯುವವರು ಕೇವಲ ಇಬ್ಬರು. ಕುಳಿತುಣ್ಣುವವರು ಹನ್ನೊಂದು ಜನ. ಆದಾಯ ಅಷ್ಟಕ್ಕಷ್ಟೆ. ಕನಸು ನನಸಾಗಬಲ್ಲದೇ. ಸಾಲದ್ದಕ್ಕೆ ಮಲತಾಯಿಯ ಸ್ವಭಾವಜನ್ಯ ರೋಗ. ಮಲ ಮಕ್ಕಳನ್ನು ದ್ವೇಷಿಸುವದು, ಅಸೂಯೆ ಸಾಧಿಸುವದು. ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಹರಿಕೃಷ್ಣರು ಕೈ ಎತ್ತಿದರು.

ಸಂಸಾರ ನೌಕೆ ಡೋಲಾಡತೊಡಗಿತು. ಸಾಲದ ಬಲೆಗೆ ಸಿಲುಕಿದರು. ಗಜಾನನ ಅಣ್ಣಾ ಮೋಹನ, ತಮ್ಮ ಪ್ರೇಮಾನಂದ, ತಂಗಿಯರಾದ ಸುಶೀಲಾ, ಶಾಲಿನಿಯವರೊಂದಿಗೆ ಬಂದುದೆಲ್ಲವನ್ನು ನಗುತ್ತಲೆ ಸ್ವೀಕರಿಸಿದ.

೧೯೬೫ ರ ಸುಮಾರು ಹರಿಕೃಷ್ಣ ಮಹಾಲೆಯವರು ದೈಹಿಕವಾಗಿ ಕುಸಿದರು. ಕೆಲಸ ಮಾಡಲು ಅಶಕ್ತರಾದರು. ಅಣ್ಣಾ ಮೋಹನನು ಗಿರೀಶ ಕಾರ್ನಾಡರೊಂದಿಗೆ ಓಡಾಡಿಕೊಂಡಿದ್ದು ಪತ್ರಿಕೆಗಳಿಗೂ ಬರೆಯುವದನ್ನು ಮಾಡುತ್ತ ಬದುಕಿಗೊಂದು ನೆಲೆ ಕಂಡುಕೊಳ್ಳಲು ಹೆಣಗಾಡುತ್ತಿದ್ದ. ಹೀಗಾಗಿ ಮನೆತನದ ಸಂಪೂರ್ಣ ಜವಾಬ್ದಾರಿ ಗಜಾನನ ಪಾಲಿಗೆ ಬಿತ್ತು. ವಯಸ್ಸಿಗೂ ಮೀರಿದ ಹೊಣೆಗಾರಿಕೆಯನ್ನು ಛಲದಿಂದ ಹೊತ್ತು ಮನೆತನವನ್ನು ಸಂಭಾಳಿಸತೊಡಗಿದ. ಅಣ್ಣಾ ಮೋಹನ ಈ ನಡುವೆ ದಾಂಡೇಲಿಯ ಪೇಪರ್ ಮಿಲ್ಲಿನಲ್ಲಿ ನೌಕರಿ ಗಿಟ್ಟಿಸಿಕೊಂಡ. ತನ್ನ ಒಂದು ವರ್ಷದ ಸೇವೆಯಲ್ಲಿ ಯುನಿಯನ್‌ನಲ್ಲಿ ಕೆಲಸ ಮಾಡಿ ಕಾರ್ಮಿಕರ ಮುಂಬಿಡನಾಗಿ ಜನಾನುರಾಗಿಯಾಗಿ ಜನರ ವಿಶ್ವಾಸವನ್ನು ಗಳಿಸಿದ. ಆದರೆ ಈ ಸಂತೋಷ ಬಹಳ ದಿನವಿರಲಿಲ್ಲ ಮೋಹನ ಕಾಳೀ ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಕಾಲು ಜಾರಿ ಸೆಳುವಿಗೆ ಸಿಲುಕಿ ಕಾಳಿಯ ಒಡಲು ಸೇರಿದ. ಗಜಾನನನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಕುಟುಂಬ ನಿರ್ವಹಣೆಗೆ ಅಲ್ಪ ಸ್ವಲ್ಪ ಅನುಕೂಲವಾಗುತ್ತಿದ್ದ ಅಣ್ಣಾ ಇಲ್ಲದಂತಾದ. ಸಂಸಾರದ ಜಂಜಾಟಗಳಿಗೆ ಕೊನೆಮೊದಲುಂಟೆ. ಅಶಕ್ತ ತಂದೆ, ಮಲತಾಯಿ ಹತ್ತು ಜನ ತಮ್ಮ ತಂಗಿಯರು ಸಂಪೂರ್ಣವಾಗಿ ಗಜಾನನರ ಆದಾಯದ ಮೇಲೆ ನಿರ್ಭರಿತರಾದರು. ಅಣ್ಣಾ ಮೋಹನನೇನೋ ಕಾಳಿ ಒಡಲು ಸೇರಿ ಇಹಲೋಕದ ಯಾತ್ರೆಯನ್ನು ಮುಗಿಸಿದ. ಆದರ ಗಜಾನನನ ಪರಿವಾರ ಸಂಸಾರ ಸಮುದ್ರವನ್ನು ಈಸಬೇಕಲ್ಲ. ಜೀವನ ಪ್ರವಾಹದಲ್ಲಿ ಮನೆತನ ಕೊಚ್ಚಿ ಹೋಗಬಾರದೆಂಬ ದಿಟ್ಟ ನಿರ್ಧಾರ ತಳೆದರು. ಧೃತಿಗೆಡದೆ ಕಾಯಕವೇ ಕೈಲಾಸ ಎನ್ನುವ ತತ್ತ್ವವನ್ನು ಅಕ್ಷರಶಃ ಅನುಸರಿಸಿ ಬಾಳ ನೌಕೆಯ ಚುಕ್ಕಾಣಿ ಹಿಡಿದು ಮುನ್ನಡೆಸಿದರು.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿಸುರಿಯೆ ।
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ ।
ಎಲ್ಲರೊಳಗೊಂದಾಗು ಮಂಕು ತಿಮ್ಮ ॥

ಕವಿ ಡಿ.ವಿ.ಜಿಯವರ ಅನುಭವಾತ್ಮದ ಸಾಕ್ಷಾತ್ಕಾರ ಗಜಾನನ ಮಹಾಲೆಯವರಿಗೆ ಸಾಧ್ಯವಾಯಿತು. ದೈವಚಿತ್ತದ ಮುಂದೆ ಮನುಷ್ಯ ಪ್ರಯತ್ನ ತಲೆಬಾಗಲೇ ಬೇಕಲ್ಲವೆ.

## ವಿವಾಹ

ಮನುಷ್ಯನು ಕಳೆದುಕೊಂಡಾಗಲೆ ಹುಡುಕಲಿಕ್ಕೆ ಆರಂಭ ಮಾಡುತ್ತಾನೆ, ಬರಿದು ಆದಾಗಲೆ ತುಂಬಿಸಿಕೊಳ್ಳಲು ಆರಂಭಿಸುತ್ತಾನೆ. ಗಜಾನನ ಮಹಾಲೆಯವರು ಮಹತ್ತರವಾದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ಮುನ್ನುಗ್ಗಿದರು. ಬಡತನದ ಕೆಂಡ ಒಡಲನ್ನು ಸುಡುತ್ತಿದ್ದರೂ ನಾಪಿತ ವೃತ್ತಿ, ಮೇಕಪ್ ಪ್ರವೃತ್ತಿಯಿಂದ ಬಾಳ ಬಂಡಿಯನ್ನು ಓಡಿಸತೊಡಗಿದರು. ಬದುಕು ಜಟಕಾ ಬಂಡಿ, ವಿಧಿಯೇ ಅದರ ಸಾಹೇಬ. ಹಾಗೆಂದು ವಿಧಿಗೆ ಎಲ್ಲವನ್ನೂ ಒಪ್ಪಿಸಿ, ಕೈಚೆಲ್ಲಿ ಕೂಡುವಂತಿಲ್ಲ, ನಿರಂತರ ಹೋರಾಟ ಮಾಡುವುದನ್ನು ಜೀವನ ಚಿಕ್ಕಂದಿನಲ್ಲಿಯೇ ಕಲಿಸಿಕೊಟ್ಟಿತ್ತು. ಸಂತೋಷ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಬಂದುದೆಲ್ಲಾ ದೇವ ಪ್ರಸಾದವೆಂದು ಭಕ್ತಿಯಿಂದ ಸ್ವೀಕರಿಸುತ್ತಿದ್ದರು. ೧೯೯೭ ರಲ್ಲಿ ಸದಾಶಿವಗಡದ ಲಕ್ಷ್ಮಣ ಶಿರೋಡಕರ್‌ರ ಮಗಳು ಕುಮುದಿನಿಯನ್ನು ಗಜಾನನ ಮಹಾಲೆಯವರು ತಮ್ಮ ಧರ್ಮಪತ್ನಿಯನ್ನಾಗಿ ಸ್ವೀಕರಿಸಿದರು. ವಿವಾಹ ಸಮಾರಂಭ ಅಂಕೋಲೆಯಲ್ಲಿ ನೆರವೇರಿತು. ಜಯಾ ಎಂಬ ಹೊಸ ಹೆಸರನ್ನಿಟ್ಟುಕೊಂಡು ಗಜಾನನ ಮಹಾಲೆಯವರ ಮನೆ ಮನ ಬೆಳಗಿದರು. ಗಜಾನನ ಮಹಾಲೆಯವರ ಜೀವನದಲ್ಲೊಂದು ಹೊಸ ಆಕರ್ಷಣೆ. ಅವರ ಕನಸುಗಳಿಗೆ ಮುನ್ನುಡಿ ಬರೆದು ಕಷ್ಟ ಸುಖಗಳನ್ನು ಹಂಚಿಕೊಳ್ಳಲು ಬಂದವರು ಜಯಾ. ತಮ್ಮ ಮದುವೆಯಾದ ನಂತರ ಮಹಾಲೆಯವರು ತಂಗಿಯರಾದ ಸುಶೀಲಾ ಹಾಗೂ ಶಾಲಿನಿಯರ ವಿವಾಹ ಮಾಡಿದರು. ಸಾಲದ ಹೊರೆ ಹೆಚ್ಚಿತು. ಮಲತಾಯಿಯ ದರ್ಪ, ದೌರ್ಜನ್ಯ, ದ್ವೇಷಾಸೂಯೆಗಳು ಹೆಚ್ಚಾದವು. ಗಜಾನನ ಮಹಾಲೆಯವರಿಗೆ ಏನು ಮಾಡಬೇಕೆನ್ನುವುದು ತಿಳಿಯದಂತಾಯಿತು.

## ಅದೃಷ್ಟ ಪರೀಕ್ಷೆಯ ಪ್ರಯತ್ನ

ಈ ನಡುವೆ ಪತ್ರಿಕೆಯಲ್ಲೊಂದು ಟೆಂಡರ್ ಪ್ರಕಟಣೆ ಬಂತು. ಕರ್ನಾಟಕ ವಿಶ್ವವಿದ್ಯಾಲಯದ ಕ್ಯಾಂಪಸ್ಸಿನಲ್ಲೊಂದು ಅಂಗಡಿ ನಡೆಸುವ ಬಗ್ಗೆ. ಅದಕ್ಕೆ ಗಜಾನನ ಮಹಾಲೆಯವರು ಕೂಡಾ ತಮ್ಮ ಅದೃಷ್ಟ ಪರೀಕ್ಷಿಸಿದರಾಯಿತೆಂದು ಟೆಂಡರಿಗೆ ಅರ್ಜಿ ಹಾಕಿದ್ದರು. ಸಾಂಸ್ಕೃತಿಕ ಕಾರ್ಯಕ್ರಮಗಳ ಸೊಬಗನ್ನು ತನ್ನ ಪ್ರಸಾಧನ ಕಲೆಯ ಸೊಬಗಿನಿಂದ ಸಂಪನ್ನಗೊಳಿಸುತ್ತಿದ್ದ ಗಜಾನನ ಮಹಾಲೆಯವರು ಧಾರವಾಡದ ಜನಕ್ಕೆ ಸಾಕಷ್ಟು ಚಿರಪರಿಚಿತರಾಗಿದ್ದರು. ಆ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದವರು ಡಾ. ಡಿ. ಸಿ. ಪಾವಟೆಯವರು. ಅಂಗಡಿ ನಡೆಸಲು ಕೋರಿ ಮಹಾಲೆಯವರು ಪಾವಟೆಯವರನ್ನು ಭೇಟಿ ಮಾಡಿದಾಗ ಅವರು ಅಂಗಡಿ ನಡೆಸುವ ಬಗ್ಗೆ ಹಣಕಾಸಿನ ಭದ್ರತೆಯ ಬಗ್ಗೆ ಮಾಮೂಲಿಯಾಗಿ ವಿಚಾರಿಸಿ ಸಂತೋಷದಿಂದ

ಅಂಗಡಿಯ ಕೀಲಿಕೈ ಕೊಟ್ಟು, ಚೆನ್ನಾಗಿ ದುಡಿ ... ಹೆಸರು ಪಡಿ ... ಎಂದು ಹರಸಿದರು. ಮಹಾ ಭಾಗ್ಯವೇ ದೊರೆತಂತಾಗಿ ಸಂತೋಷದಿಂದ ಮನೆಗೆ ಬಂದು ಅದೇ ಖುಶಿಯಿಂದ ಆ ಹಿರಿಯ ಚೇತನದ ನೆನಪಿನಲ್ಲಿ ಭಾವಚಿತ್ರವನ್ನು ರಚಿಸಿ ಕೃತಜ್ಞಾಪೂರ್ವಕವಾಗಿ ಅವರಿಗೆ ಅದನ್ನೊಪ್ಪಿಸಿದರು. ಚಿತ್ರ ಕೊಟ್ಟ, ಪಡೆದ ವ್ಯಕ್ತಿಗಳೀರ್ವರ ಕಣ್ಣಂತೂ ಒದ್ದೆ. ಕೃತಜ್ಞ ಕಣ್ಣುಗಳು ಹನಿ ಸುರಿಸುವದು ಸಹಜ.

ಯುನಿವರ್ಸಿಟಿಯಲ್ಲಿ ಸಲೂನ್ ಅಂಗಡಿಯನ್ನು ಪ್ರಾರಂಭಿಸಿದರು. ಶಿಕ್ಷಿತ ಗಿರಾಕಿಗಳು ಹೆಚ್ಚಾಗಿ ಬರುತ್ತಿದ್ದರು. ವ್ಯಾಪಾರ ಚೆನ್ನಾಗಿ ನಡೆಯತೊಡಗಿತು. ಅದೃಷ್ಟ ಖುಲಾಯಿಸಿತೆಂದು ನಿಟ್ಟುಸಿರು ಬಿಟ್ಟರು.

## ಆತಂಕದ ತೆಕ್ಕೆಯಲ್ಲಿ

ಈ ವಿಷಯ ಮಲತಾಯಿಗೆ ತಿಳಿದು ಹೊಟ್ಟೆಕಿಚ್ಚಿನಿಂದ ಉರಿಯತೊಡಗಿದಳು. ಅವನೇಕೆ ನಡೆಸಬೇಕು, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಯಾಕೆ ನಡೆಸಬಾರದು ಹೀಗೆ ದುಷ್ಟ ವಿಚಾರಗಳನ್ನು ಮಾಡಹತ್ತಿದಳು. ಅದನ್ನು ಕಾರ್ಯರೂಪದಲ್ಲಿ ತಂದೇಬಿಟ್ಟಳು. ಮೇಕಪ್‌ಗೆ ಹೋದ ಸಮಯ ಸಾಧಿಸಿ ಬೀಗದ ಕೈ ಕಸಿದುಕೊಂಡು ಅಂಗಡಿಗೆ ಬೀಗ ಜಡಿದು ಕೀಲಿಕೈಯನ್ನು ತಮ್ಮಲೇ ಇರಿಸಿಕೊಂಡಾಗ ಗಜಾನನ ತಬ್ಬಿಬ್ಬಾದರು. ಮಲತಾಯಿಯ ಜೊತೆಗೆ ತಂದೆಯೂ ಅವರ ತಾಳಕ್ಕೆ ಕುಣಿದು ಅವಾಚ್ಯ ಶಬ್ದಗಳಿಂದ ಬೈದು ಅಂಗಡಿ ಮನೆ ಬಿಟ್ಟು ಹೊರಹಾಕಿದರು. ದಿಕ್ಕು ತೋಚದಂತಾಗಿ ಗಜಾನನ ಮಹಾಲೆಯವರು ಪತ್ನಿಯೊಂದಿಗೆ ಸೀದಾ ಅಂಕೋಲೆಗೆ ಹೋಗಿ ದೊಡ್ಡಪ್ಪ ಪುಂಡಲೀಕ ಮಹಾಲೆಯವರ ಆಶ್ರಯದಲ್ಲಿ ಸೇರಿದರು. ಈ ಘಟನೆ ನಡೆದದ್ದು ೧೯೬೭ರ ಸುಮಾರು.

## ಮತ್ತೆ ಮರಳಿ ಧಾರವಾಡಕ್ಕೆ

ಧಾರವಾಡದಲ್ಲಿ ನೆಲೆಸಿದ್ದ ಶ್ರೀಪಾದ ಶೆಟ್ಟಿಯವರು ಅಕಸ್ಮಾತ್ತಾಗಿ ಪುಂಡಲೀಕ ಮಹಾಲೆಯವರ ಮನೆಗೆ ಬಂದು ಗಜಾನನ ಮಹಾಲೆಯವರನ್ನು ನೋಡಿ ಧಾರವಾಡದೊಂದಿಗೆ ಅವರ ನಂಟನ್ನು ನೆನಪಿಸಿ ಪುನಃ ವಾಪಸು ಧಾರವಾಡಕ್ಕೆ ಬರಲು ತಿಳಿಸಿದಾಗ, ಜೊತೆಗೆ ದೊಡ್ಡಪ್ಪ ಕೂಡ ಧಾರವಾಡಕ್ಕೆ ಹೋಗಲು ಒತ್ತಾಯಿಸಿ ಧಾರವಾಡ ಕಲಾ ರಸಿಕರ ಕೋರಿಕೆಯೂ ಅದೇ ಆಗಿದೆ, ಹೋಗು ಅಂತ ಹೇಳಿದಾಗ ಪತ್ನಿಯನ್ನು ಅಂಕೋಲೆಯಲ್ಲಿ ಬಿಟ್ಟು ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷಿಸಿಕೊಳ್ಳಲು ಧಾರವಾಡಕ್ಕೆ ಬಂದರು. ಧಾರವಾಡಕ್ಕೆ ಬರಲು ಬಸ್ಸಿಗೂ ಸಹ ಹಣವಿರಲಿಲ್ಲ. ಶ್ರೀಪಾದ ಶೆಟ್ಟರೆ ಟಿಕೇಟಿಗೆ ರೊಕ್ಕ ತೆತ್ತರು. ಧಾರವಾಡದ ತಮ್ಮ ಮನೆಗೆ ಹೋದರು. ಮನೆಯ ವಾತಾವರಣ ಯಥಾಸ್ಥಿತಿ. ಮಲತಾಯಿ ದರ್ಬಾರು. ಏನೂ ಮಾಡುವಂತಿರಲಿಲ್ಲ. ಕ್ಷೌರದ ಪೆಟ್ಟಿಗೆಯನ್ನು

ಹಿಡಿದು ಮನೆ ಮನೆಗೆ ಅಲೆದರು. ಜೀವನೋತ್ಸಾಹ ಕಳೆದುಕೊಳ್ಳದೇ, ಬಂದದ್ದೆಲ್ಲ ಬರಲಿ, ನಿನ್ನ ದಯೆ ಇರಲಿ ಎಂದು ದೇವರ ಮೇಲೆ ಭಾರ ಹಾಕಿ ದಿನ ತಳ್ಳಿದರು. ಹೆಂಡತಿ ಜಯಾಳನ್ನು ಕರೆತಂದರು. ಮಲತಾಯಿಯ ಹೀಯಾಳಿಕೆ, ಕಟು ಮಾತುಗಳು ಹೆಚ್ಚಾದವು. ತನಗೂ ಹೆಂಡತಿಗೂ ಹಳಸಿದ ಎಂಜಲನ್ನು ಹಾಕಿದರೂ ಚಕಾರವೆತ್ತದೇ ತಿಂದರು. ೧೯೬೯ ರ ಸುಮಾರು ಜಯಾ ಹೆಣ್ಣು ಮಗುವಿಗೆ ಜನ್ಮವಿತ್ತರು. ಭಾರತಿ ಅಂತ ಹೆಸರಿಟ್ಟರು. ದಿನದಿನಕ್ಕೂ ಮನೆಯಲ್ಲಿ ರಂಪಾಟ, ಹೀಯಾಳಿಸುವಿಕೆ ಹೆಚ್ಚಾಗಿ ಗಜಾನನ ಮಹಾಲೆಯವರಿಗೆ ಸಾಕಾಗಿ ಮನೆ ಬಿಡುವ ನಿರ್ಧಾರ ತಳೆದರು. ಟ್ರೇನಿಂಗ್ ಕಾಲೇಜ ರಸ್ತೆಯ ಪಕ್ಕದಲ್ಲಿ, ಚೆನ್ನಮ್ಮ ಪಾರ್ಕ್ ಸನಿಹದಲ್ಲಿ ಮಹಿಷಿ ಬ್ಲಾಕ್‌ನಲ್ಲಿ ಬಾಡಿಗೆಗೆ ಮನೆಯನ್ನು ಹಿಡಿದರು. ತಿಂಗಳು ಭಾಡಿಗೆ ೫ ರೂಪಾಯಿ. ಪತ್ನಿ ಮಗಳೊಂದಿಗೆ ತಮ್ಮ ಪುಟ್ಟ ಸಂಸಾರ ಆರಂಭಿಸಿದರು. ಮಗ ಕಿರಣ ಹುಟ್ಟಿದ ನಂತರ ಕಿರಿ ಮಗ ಸಂತೋಷ ಹುಟ್ಟಿದ. ಮಲತಾಯಿಯು ಯಾವ ರೀತಿ ಅಸೂಯೆ ಪಡುತ್ತಿದ್ದಳೆನ್ನುವುದಕ್ಕೆ ಒಂದು ಸಣ್ಣ ಉದಾಹರಣೆಯೆಂದರೆ ಒಮ್ಮೆ ಗಜಾನನರ ಪತ್ನಿಗೆ ಮೈಯಲ್ಲಿ ಆರಾಮವಿರಲಿಲ್ಲ. ಮಗ ಕಿರಣನನ್ನು ತಂದೆಯ ಮನೆಗೆ ಕಳಿಸಿದರು. ಸುಮಿತ್ರಮ್ಮನವರು ಕಿರಣನಿಗೆ ಜಳಕ ಮಾಡಿಸುವಾಗ ಬಿಸಿ ನೀರನ್ನು ಮೈ ಕೈಗೆ ಹಾಕಿ ಸುಡಿಸಿದರು. ಮಗ ನೋವು ತಡೆಯದೆ ಬೊಬ್ಬಿಡುತ್ತಾ ಮನೆಗೆ ವಾಪಸು ಓಡಿ ಬಂದ. ಈ ರೀತಿ ಕಿರುಕುಳವನ್ನು ಗಜಾನನ ಮಹಾಲೆಯವರು ತಂದೆ ಸುಮಿತ್ರಾರವರನ್ನು ಮದುವೆಯಾದಾಗಿನಿಂದಲೂ ಸಹಿಸುತ್ತಲೇ ಬಂದಿದ್ದರು. ಆದರೆ ಮಕ್ಕಳಿಗೂ ಸಹ ಅದನ್ನೇ ಮುಂದುವರಿಸಿದ ಮಲತಾಯಿ ಧೋರಣೆಯಿಂದ ಅವರು ತುಂಬ ನೊಂದರು.

ತಮ್ಮ ಶಾಲಾ ಜೀವನ ಕೇವಲ ೭ ನೆಯ ಈಯತ್ತೆಗೆ ಪ್ರತಿಕೂಲ ಪರಿಸ್ಥಿತಿಯಿಂದಾಗಿ ನಿಂತು ಹೋಗಿದ್ದರಿಂದ ಮಕ್ಕಳಿಗೆ ಒಳ್ಳೆಯ ವಿದ್ಯೆ ನೀಡಬೇಕೆಂಬ ಉತ್ಕಟವಾದ ಹಂಬಲವಿತ್ತು. ಭಾರತಿ ಪ್ರಜೆಂಟೇಶನ್ ಕಾನ್ವೆಂಟ್ ಸ್ಕೂಲ್‌ನಲ್ಲಿ ಕಲಿಯತೊಡಗಿದಳು. ಶಾಲೆಯಲ್ಲಿ ನೀಡುತ್ತಿದ್ದ ಮಧ್ಯಾಹ್ನದ ಉಪಹಾರ, ಧಾನ್ಯಗಳು ಮನೆಮಂದಿಗೂ ಸಲ್ಲುತ್ತಿದ್ದವು. ಸರ್ವೇ ಜನಾಃ ಸುಖಿನೋ ಭವಂತು ಎಂಬ ಉದಾತ್ತ ಧ್ಯೇಯವು ಮನೆ ಮಂದಿಯಲ್ಲೆಲ್ಲ ತುಂಬಿ ತುಳುಕುತ್ತಿದ್ದವು. ಆಹಾರ ಯಾವ ರೂಪದಲ್ಲಿ ಬಂದರೂ ಸಹ ಎಲ್ಲರೂ ಹಂಚಿಕೊಂಡು ತಿನ್ನುತ್ತಿದ್ದರು.

## ಸೃಜನಶೀಲ ಗಜಾನನ

ಗಜಾನನ ಮಹಾಲೆ ತುಂಬ ಸಾತ್ವಿಕ ಮನುಷ್ಯ, ಸೃಜನಶೀಲ ಕಲಾವಿದರಲ್ಲದೆ ಮುಗ್ಧರು ಕೂಡ ಆಗಿದ್ದರು. ಅಂತಹ ಕಷ್ಟದ ದಿನಗಳಲ್ಲಿ ಪರಿಶ್ರಮ ಪಟ್ಟು ಅಂಗಡಿಯೊಂದನ್ನು ಭಾಡಿಗೆಗೆ ಪಡೆದಿದ್ದರು. ಹಗಲು ನಾಪಿತನಾಗಿ ಕೈ ಚಳಕ, ರಾತ್ರಿ

ಪ್ರಸಾಧನ ಕಲೆಯಲ್ಲಿ ತಮ್ಮ ಕೈ ಚಳಕ ತೋರುತ್ತಿದ್ದರು. ಅಂಗಡಿಯ ಮಾಲೀಕರು ಇವರ ಮುಗ್ಧತೆಯ ದುರ್ಬಳಕೆಯನ್ನು ಮಾಡಿಕೊಂಡು ಭಾಡಿಗೆ ಏರಿಸಿದ್ದರಿಂದ ಕಳವಳಗೊಂಡ ಮಹಾಲೆಯವರು ದುಬಾರಿ ಭಾಡಿಗೆ ತೆರಲಾಗದೆ ಅಂಗಡಿಯನ್ನೇ ಬಿಟ್ಟುಕೊಡಬೇಕಾಯಿತು. ಮತ್ತೆ ಹಡಪದ ಪೆಟ್ಟಿಗೆಯ ಆಸರೆಗೆ ಮೊರೆ ಹೋಗಿ ಮನೆ ಮನೆ ಸುತ್ತುವ ಕೆಲಸ ಮುಂದುವರಿಸಿ ಆಯುಷ್ಕರ್ಮ ಕ್ರಿಯೆಯಲ್ಲಿ ಸಂತೋಷಪಟ್ಟರು. ಆದರಲ್ಲಿಯ ಅಲ್ಪ ಸ್ವಲ್ಪ ಹಣದ ಉಳಿತಾಯ ಮಾಡುತ್ತ ಮಕ್ಕಳ ವಿದ್ಯಾಭ್ಯಾಸ ಮಾಡಿಸುತ್ತಿದ್ದರು.

ಗಜಾನನ ಮಹಾಲೆಯವರು ಒಬ್ಬ ಸಂಪೂರ್ಣ ಕಲಾವಿದ. ಹಾರ್ಮೋನಿಯಂ ನುಡಿಸುವುದು, ತಬಲಾ ಸಾಥ ನೀಡುವುದು, ಪ್ರಸಾಧನ ಕಲಾವಿದರಾಗಿ ನಾಟಕನೃತ್ಯಗಳಲ್ಲಿ ಬಣ್ಣ ಹಚ್ಚುವುದು, ಎಲ್ಲವನ್ನು ತಮ್ಮದೇ ಶೈಲಿಯಲ್ಲಿ ಮಾಡಿ ಕಲಾ ಸೇವೆಯನ್ನು ಮಾಡಿದ್ದಾರೆ.

ಸರ್ವಜ್ಞನೆಂಬವನು ಗರ್ವದಿಂದಾದವನೆ
ಸರ್ವರೊಳಗೊಂದೊಂದು ನುಡಿಗಲಿತು
ವಿದ್ಯೆಯಾ ಪರ್ವತವೆ ಆದ ಸರ್ವಜ್ಞ.

ಎಂಬ ಸರ್ವಜ್ಞನ ಉಕ್ತಿಯಂತೆ ವಿನೀತ ಭಾವ. ಜೀವನದಲ್ಲಿ ಸಾಕಷ್ಟು ಕಷ್ಟನಷ್ಟಗಳನ್ನು ಅನುಭವಿಸಿದ್ದರೂ ಕಲಾ ಸೇವೆ ಮಾಡುವಾಗ ಒಬ್ಬ ವಿದ್ಯಾರ್ಥಿಯಂತೆ ಯಾವಾಗಲೂ ಪ್ರತಿ ಪಾತ್ರದ ಪ್ರಸಾಧನ ಮಾಡುವಾಗ ವಿಧೇಯತೆಯಿಂದ ನಿಂತು ಪಾತ್ರವೇ ತಾನಾಗಿ, ತಾನೇ ಪಾತ್ರವಾಗಿ ಪಾತ್ರವನ್ನು ಅನುಭವಿಸಿ ನಿರ್ದೇಶಕರ ಭಾವನೆಗಳನ್ನು ಅರಿತು ಬಣ್ಣ ಹಚ್ಚುತ್ತಿದ್ದರು. ವೈವಿಧ್ಯಮಯ ಪಾತ್ರಗಳನ್ನು ಸೃಷ್ಟಿಸಿ ಸಾಮಾನ್ಯರನ್ನು ಅಸಾಮಾನ್ಯರನ್ನು ರೂಪಿಸಿ, ರಾಜ ಮಹಾರಾಜರನ್ನು ರೂಪಿಸಿ, ಒಡ್ಡೋಲಗ ನಡೆಸುವ ನೃತ್ಯ ಮದನಿಕೆಗಳ ಮೋಹಕತೆಯಿಂದ ರಸಿಕರೆದೆಯನ್ನು ತಲ್ಲಣಗೊಳಿಸುವಂತೆ ಮಾಡುತ್ತಿದ್ದರು. ಪೌರಾಣಿಕ ಯುಗದ ಘನತೆ, ಗಾಂಭೀರ್ಯಗಳು ತಾನೆ ತಾನಾಗಿ ಒಡಮೂಡುತ್ತಿದ್ದವು. ದೇವ ರಾಕ್ಷಸರೂ ಸಹಿತ ಇವರ ಕೈ ಚಳಕದಿಂದ ತೆರೆಯ ಮೇಲೆ ಪ್ರತ್ಯಕ್ಷರಾಗುತ್ತ ಯಾವುದೋ ಒಂದು ಭವ್ಯ ಲೋಕಕ್ಕೆ ಪ್ರೇಕ್ಷಕರನ್ನು ಕರೆದೊಯ್ಯುತ್ತಿದ್ದರು. ಪೌರಾಣಿಕ ಸಾಮಾಜಿಕ ನಾಟಕಗಳಿಗೆ ಪ್ರಸಾಧನ ಮಾಡುವಲ್ಲಿ ಅವರು ಸಿದ್ಧ ಹಸ್ತರು.

## ಉದರನಿಮಿತ್ತಂ ಬಹುಕೃತ ವೇಷಂ

ಹೊಟ್ಟೆಪಾಡಿಗಾಗಿ ಮಹಾಲೆಯವರು ಸ್ವತಃ ಸಾಕಷ್ಟು ವೇಷ ಭೂಷಣಗಳನ್ನು ಧರಿಸಿದ್ದಾರೆ. ಬೀದಿ ಬೀದಿ ಸುತ್ತಿದ್ದಾರೆ. ತನ್ನ ಸಂಸಾರ ಬೀದಿ ಪಾಲಾಗಬಾರದೆಂಬ ಛಲದಿಂದ ಹಗಲಿರುಳು ದುಡಿದಿದ್ದಾರೆ. ನೇಪಥ್ಯ ರಂಗಪ್ರೇಮಿಯಾದ ಇವರು ಆರ್ಥಿಕ ಬದುಕಿನಲ್ಲಿ ನೇಪಥ್ಯದಲ್ಲಿಯೇ ಉಳಿದಿದ್ದಾರೆ. ಯಾವುದೆ ಪಾತ್ರಧಾರಿ ತನ್ನೆಲ್ಲ ನೋವುಗಳನ್ನು

ಎದೆಯಲ್ಲಿಟ್ಟುಕೊಂಡು ತಾನು ಧರಿಸಿದ ಪಾತ್ರಕ್ಕೆ ತಕ್ಕ ಹಾಗೆ ಹೇಗೆ ಅಭಿನಯ ಮಾಡುತ್ತಾನೋ ಅದೇ ರೀತಿ ಮಹಾಲೆಯವರು ಕೂಡ ತಮ್ಮ ಮನೆಯಲ್ಲಿ ಬಡತನದ ಭೂತ ತಾಂಡವವಾಡುತ್ತಿದ್ದರೂ ತೋರಗೊಡದೆ ಹಸನ್ಮುಖಿಯಾಗಿ ಯಾವುದನ್ನೂ ಹೊರ ಜಗತ್ತಿಗೆ ತೋರಗೊಡದೇ ತನ್ಮಯತೆಯಿಂದ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದರು. ಬಂದದ್ದೆಲ್ಲ ಬರಲಿ ಭಗವಂತ ನಿನ್ನ ದಯೆಯೊಂದಿರಲಿ ಎಂದು ಕಷ್ಟ ನಷ್ಟಗಳನ್ನೆಲ್ಲ ದೇವರ ಮೇಲೆ ಹಾಕಿ ತಮ್ಮ ಸಂಪರ್ಕಕ್ಕೆ ಬಂದದ್ದನ್ನೆಲ್ಲ ಸಂತಸದ ಪನ್ನೀರಿನಲ್ಲಿ ತೋಯಿಸಿದರು.

ಪ್ರಸಾಧನ ಕಲೆಯಲ್ಲಿ ಗಜಾನನ ಮಹಾಲೆಯವರಿಗೆ ತಂದೆ ಹರಿಕೃಷ್ಣರೇ ಮೊದಲ ಗುರು. ಬಾಲ್ಯದಲ್ಲಿ ಅವರಿಂದಲೇ ಮಾರ್ಗದರ್ಶನ. ದೊಡ್ಡಪ್ಪಂದಿರಾದ ನಾಗಪ್ಪ, ಪುಂಡಲೀಕರ ಕಲಾ ಪ್ರೀತಿ, ಕಾಯಕ ಸ್ಫೂರ್ತಿಯಿಂದಲೂ ಸ್ಫೂರ್ತಿ ಪಡೆದಿದ್ದಾರೆ. ಮತ್ತು ಹುಯಿಲಗೋಳ ಮಾಸ್ತರರು, ಶ್ರೀಖಂಡೆ ಮಾಸ್ತರರು, ದೀಕ್ಷಿತರು, ರಾಮರಾವ್ ಕುಲಕರ್ಣಿಯವರು ಹುರಿದುಂಬಿಸಿ ಶಾಲಾ ಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ ಮೇಕಪ್ ಮಾಡಲು ಕರೆ ಕಳಿಸಿ ಹುರಿದುಂಬಿಸಿದ್ದಾರೆ. ತಂದೆ ಮಕ್ಕಳಿಗೆ ನೃತ್ಯ ನಾಟಕಗಳಲ್ಲಿ ಯಶಸ್ವಿಯಾಗಿಸಲು ನೇಪಥ್ಯದಲ್ಲಿ ನೆರವಾಗಿದ್ದಾರೆ. ಇವೆಲ್ಲವನ್ನು ನೆನಪಿನ ತೆಕ್ಕೆಯಿಂದ ಅಕ್ಕರೆಯ ಎಸಳುಗಳನ್ನು ಅರಳಿಸಿಕೊಂಡಿದ್ದುಂಟು. ತಂದೆಯೊಡನೆ ಪ್ರಾರಂಭಗೊಂಡ ಪ್ರಸಾಧನ ಕಲೆಯ ಶಿಕ್ಷಣ ಯಾವ ರೀತಿ ಪೂರ್ತಿಗೊಂಡು ಅವರೊಬ್ಬ ಸ್ವತಂತ್ರ ಪ್ರಸಾಧನ ಕಲಾವಿದರೆಂಬುದನ್ನು ಈ ರೀತಿ ವಿವರಿಸುತ್ತಾರೆ.

ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಮೇಕಪ್ ಮಾಡಿದ್ದರ ಕಂಪು ಎಲ್ಲೆಡೆ ಸೂಸತೊಡಗಿತ್ತು. ವಿಶ್ವವಿದ್ಯಾಲಯದ ಸಮಾರಂಭಗಳಿಗೆ ಪ್ರಸಾಧನ ಕಲೆಗಾಗಿ ಕರೆಗಳು ಬರತೊಡಗಿದವು. ಕೆಲವೆಡೆ ತಂದೆಯವರ ಕಣ್ಗಾವಲಿನಲ್ಲಿ ಮಾಡಿದರೂ ಸಹಿತ ಸ್ವತಂತ್ರವಾಗಿ ಮೇಕಪ್ ಮಾಡತೊಡಗಿದರು. ತಂದೆ ಮಕ್ಕಳು ತಮ್ಮಲ್ಲಿ ಕಲಾ ಪ್ರೇಮಿಗಳಿಗಿಟ್ಟ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ತದೇಕ ಚಿತ್ತದಿಂದ ಎಲ್ಲೆಡೆ ಕೆಲಸ ಮಾಡುತ್ತಿದ್ದರು. ಯುನಿವರ್ಸಿಟಿ ಪಬ್ಲಿಕ್ ಸ್ಕೂಲಿನ ಗ್ಯಾದರಿಂಗ್‌ನ ರಂಗು ಗುಂಗು ಬಹುಕಾಲ ಜನ ಮಾನಸದಲ್ಲಿ ಉಳಿದು ಅದರೊಂದಿಗೆ ತಂದೆ ಮಕ್ಕಳ ಕೈಚಳಕದ ತಾರೀಫು ಸಹ ಹರಡುತ್ತಿತ್ತು. ಕರ್ನಾಟಕ ಹೈಸ್ಕೂಲ್, ಬಾಸೆಲ್‌ಮಿಶನ್ ಹೈಸ್ಕೂಲು, ಕೆ.ಇ.ಬೋರ್ಡ್ಸ್ ಹೈಸ್ಕೂಲು, ಸರಕಾರಿ ಹೈಸ್ಕೂಲ್ ಹೀಗೆ ಎಲ್ಲೆಡೆಗಳಿಂದ ಪ್ರಸಾಧನಕ್ಕಾಗಿ ಕರೆಗಳು ಬರತೊಡಗಿದವು.

## ಶ್ರೀರಂಗರ ಆಶೀರ್ವಾದ

ಖ್ಯಾತ ನಾಟಕಕಾರರಾದ ಶ್ರೀರಂಗರು ಒಮ್ಮೆ ತಮ್ಮ ತಂಡದೊಂದಿಗೆ ಧಾರವಾಡಕ್ಕೆ ನಾಟಕವಾಡಲು ಬಂದಿದ್ದರು. ಅದೇ ಸಮಯದಲ್ಲಿ ಬಾಸೆಲ್ ಮಿಶನ್ ಸ್ಕೂಲ್‌ನಲ್ಲಿ

ಒಂದು ಸಮಾರಂಭ ನಡೆದಿತ್ತು. ಮತ್ತು ಶಾಲಾ ಮಕ್ಕಳು 'ಭಕ್ತ ಪ್ರಹ್ಲಾದ' ಮಾಡುತ್ತಿದ್ದರು. ನಾಟಕದ ಮೇಕಪ್ ಮಾಡುವ ಕುರಿತು ತಂದೆ ಮಕ್ಕಳು ಅಲ್ಲಿಗೆ ಬಂದಿದ್ದರು. ಅದೇ ಸಂದರ್ಭದಲ್ಲಿ ಬಂದಿದ್ದ ಶ್ರೀರಂಗರು 'ಭಕ್ತ ಪ್ರಹ್ಲಾದ' ನಾಟಕದ ಪುಟ್ಟ ಕಲಾವಿದರ ಮೇಕಪ್ ನೋಡಿ ಬಹಳ ಸಂತೋಷಪಟ್ಟರು. ಜೊತೆಗೆ ನೋಡಿ, ಹರಿಕೃಷ್ಣ .. ಇವತ್ತು ನಮ್ಮ ಮೇಕಪ್ ಮ್ಯಾನ್ ನಮ್ಮ ಜೊತೆಗೆ ಬಂದಿಲ್ಲ, ನೀವೇ ನಮ್ಮ ಕಲಾವಿದರಿಗೆ ಬಣ್ಣ ಹಚ್ಚಿ ಎಂದು ವಿನಂತಿಸಿದಾಗ ಹರಿಕೃಷ್ಣರು ಸಂತೋಷದಿಂದ ಒಪ್ಪಿಕೊಂಡರು.

ಶ್ರೀರಂಗರ ತಂಡಕ್ಕೆ ವಿಶೇಷ ಕಾಳಜಿಯಿಂದ ಹರಿಕೃಷ್ಣರು ಮೇಕಪ್ ಮಾಡತೊಡಗಿದ್ದರು. ಕೆಲವೆಲ್ಲ ಕೆಲಸ ಮುಗಿದು ಬಣ್ಣ ಹಚ್ಚಿಕೊಂಡವರು ಡ್ರೆಸ್ ಮಾಡಿಕೊಳ್ಳ ತೊಡಗಿದರು. ಹರಿಕೃಷ್ಣರು ಮಹಿಳಾ ಪಾತ್ರಕ್ಕೆ ಪ್ರಸಾಧನ ವಿಧಿಸುತ್ತಿದ್ದರು. ವೇಳೆ ಮೀರುತ್ತಿದ್ದುದರಿಂದ ಚಡಪಡಿಸುತ್ತಲೇ ಶ್ರೀರಂಗರು ಧಾವಿಸಿ ಬಂದು ಮತ್ತಿನ್ಯಾರಾದರೂ ಮೇಕಪ್ ಮಾಡುವವರು ಇದ್ದಾರೇನು ಅಂತ ಪ್ರಶ್ನಿಸಿದರು.

ಆಗ ಹರಿಕೃಷ್ಣರು ನನ್ನ ಮಗ ಗಜಾನನನೂ ಸಹ ಮಾಡ್ತಾನ ಸಾಹೇಬ್ರ ಅಂತ ಹೇಳಿದರು. ಹೌದೇ ಬಹಳ ಛಲೋ ಆಯಿತು, ನನಗೆ ಗುಮಾಸ್ತನ ಮೇಕಪ್ ಮಾಡು ಲಗೂನ ಬಾ, ಅಂತ ಶ್ರೀರಂಗರು ಸ್ಟೂಲು ಜಗ್ಗಿ ಗಜಾನನರನ್ನು ಕರೆದೇ ಬಿಟ್ಟಾಗ ಗಜಾನನನ ಎದೆಯಲ್ಲಿ ಡವ ಡವ ಪ್ರಾರಂಭವಾಗಿಬಿಟ್ಟಿತ್ತು. ಸಂತೋಷದೊಂದಿಗೆ ದುಗುಡ. ಶ್ರೀರಂಗರಂಥ ಮಹಾನ್ ಕಲಾವಿದರಿಗೆ ಬಣ್ಣ ಹಚ್ಚುವ ಕೆಲಸ. ಧೈರ್ಯ ಮಾಡಿ ಮುಖ ತೀಡಲು ಆರಂಭಿಸಿದರು. ಬಣ್ಣ ಚಿತ್ತಾರದಲ್ಲಿ ಶ್ರೀರಂಗರ ಮುಖವನ್ನು ತಮ್ಮ ಜಾಣತನವನ್ನೆಲ್ಲ ಸೇರಿಸಿ ಬಳಿದರು. ಮೇಕಪ್ ಮುಗಿದ ನಂತರ ಕನ್ನಡಿಯಲ್ಲಿ ತಮ್ಮ ಮುಖ ನೋಡಿಕೊಂಡ ಶ್ರೀರಂಗರು ಬಹಳ ಸಂತೋಷಪಟ್ಟು ಬಹಳೇ ಚೆನ್ನಾಗಿದೆ ಅಂತ ಸರ್ಟಿಫಿಕೇಟು ನೀಡಿದರು. ಗಜಾನನ ಮಹಾಲೆಯವರಿಗೆ ಸ್ವರ್ಗವೇ ಕೈಗೆ ಸಿಕ್ಕಂತಾಯಿತು.

ನಾಟಕ ಪ್ರಾರಂಭವಾಗಿ ಪ್ರೇಕ್ಷಕರು ಹರ್ಷ ವ್ಯಕ್ತಪಡಿಸಿದರು. ನಾಟಕ ನೋಡಲು ಬಂದಿದ್ದ ಕವಿ ದ. ರಾ. ಬೇಂದ್ರೆಯವರು ಸ್ಟೇಜಿಗೆ ನುಗ್ಗಿ ಬಂದು ಎಲ್ಲಾ ಛಲೋ ಮಾಡಿರೋ, ನನ್ನ ಹಾಗೆಯೇ ಪ್ರಸಾಧನ ಮಾಡೀರಲ್ಲೋ ಎಂದು ಸಂತೋಷದಿಂದ ಕೇಳಿದಾಗ ಶ್ರೀರಂಗರು ಬದಿಯಲ್ಲಿದ್ದ ಗಜಾನನ ಮಹಾಲೆಯವರನ್ನು ತೋರಿಸಿದಾಗ ಗಜಾನನರಿಗೆ ಕುಳಿತಲ್ಲೇ ಬೆವರಿದ ಅನುಭವ. ಬೇಂದ್ರೆಯವರಿಂದ ಶಹಬ್ಬಾಶ್‌ಗಿರಿ ಪಡೆದ ಮೇಲಂತೂ ಗಜಾನನರಿಗೆ ಜಗತ್ತನ್ನೇ ಜಯಿಸಿದ ಸಂತೋಷ. ಅಲ್ಲಿಂದ ಮತ್ತೆ ಅವರು ಮತ್ತೆ ಹಿಂದಿರುಗಿ ನೋಡಲಿಲ್ಲ.

ಹಿರಿಯ ಚಿತ್ರ ಕಲಾವಿದರಾದ ಕೆ. ಅಶ್ವತ್ಥ ಅವರಿಗೆ ಯಜಮಾನನ ಪಾತ್ರಕ್ಕಾಗಿ ಮೇಕಪ್ ಮಾಡಿದಾಗಲೂ ಸಹ ಇದೇ ತರಹದ ಖುಶಿಯನ್ನು ಅನುಭವಿಸಿದ್ದಾರೆ. ಹೀಗೆ ಅನೇಕ ಕಲಾ ಚೇತನಗಳಿಗೆ ಬಣ್ಣ ಹಚ್ಚಿದ ಹೆಮ್ಮೆ ಗಜಾನನ ಮಹಾಲೆಯವರದು.

## ವಿಕಾಸ ಪಥದಲ್ಲಿ

೧೯೫೪ ರಲ್ಲಿ ಕರ್ನಾಟಕ ಕಾಲೇಜಿನ ವಾರ್ಷಿಕ ಸಮಾರಂಭದಲ್ಲಿ ಕಂದಗಲ್ ಹಣಮಂತರಾವ್ ಅವರ 'ಬಡತನದ ಭೂತ' ನಾಟಕವನ್ನು ಧಾರವಾಡದ ಹೊಸಯಲ್ಲಾಪೂರ ಸಂಘದವರು ಆಡಿದಾಗ ಕಲಾವಿದರಿಗೆ ಬಣ್ಣ ಹಚ್ಚುವ ಹೊಣೆ ಗಜಾನನರಿಗೆ ಬಿತ್ತು. ಇವರ ಕೈಚಳಕವನ್ನು ನೋಡಿದ ಪ್ರೊ. ಆರ್ಮಾಂಡೋ ಮೆನೆಜಿಸ್, ಮುನವಳ್ಳಿ, ವಿ. ಕೃ. ಗೋಕಾಕ, ಸ. ಸ. ಮಾಳವಾಡ, ಜಹಗೀರದಾರ, ಪ್ರೊ. ಬಾಲಕೃಷ್ಣ ಮುಂತಾದವರು ಬೆನ್ನಟ್ಟಿ ಹುರಿದುಂಬಿಸಿದರು. ಧಾರವಾಡದ ಸಾಂಸ್ಕೃತಿಕ ಲೋಕದ ಗಣ್ಯರ, ಸಾಹಿತಿಗಳ ಸಂಗೀತ ಸಾಧಕರ ಶಹಬ್ಬಾಶ್‌ಗಿರಿ ದೊರೆತು ಗಜಾನನ ಮಹಾಲೆಯವರು ಮನೆ ಮಾತಾದರು. ಅದೇ ವರ್ಷ ದೆಹಲಿಯಲ್ಲಿ 'ಯುವಜನೋತ್ಸವ' (ಯುಥ್ ಫೆಸ್ಟಿವಲ್) ನಲ್ಲಿ ಭಾಗವಹಿಸಿದ ಧಾರವಾಡದ ತಂಡಕ್ಕೆ ಪ್ರಸಾಧನ ಮಾಡಲು ಗಜಾನನರಿಗೆ ಕರೆ ಬಂದಾಗ ಮನೆಯಲ್ಲಿ ಇನ್ನಿಲ್ಲದ ಸಂಭ್ರಮ, ದೆಹಲಿಯಲ್ಲಿ ಇವರ ಮೇಕಪ್ ಮಿಂಚಿತು. ಉಮ್ರಾಣಿಯವರ ಲೇಖಕನ ಪಾತ್ರ ಕಡೆದ ಗಜಾನನ ಮಹಾಲೆಯವರಿಗೆ ಅಂದಿನ ಪ್ರಧಾನಿ ಪಂಡಿತ ಜವಾಹರಲಾಲ ನೆಹರು ಅವರಿಂದ ಶಹಬ್ಬಾಸ್‌ಗಿರಿ ದೊರೆಯಿತು. 'ಆಥರ್' ನನ್ನು ಆಥರ ಸೃಷ್ಟಿಸಿದ ಮಹಾಲೆ ಎಂಬ ಮಾಂತ್ರಿಕನನ್ನು ರಾಜಧಾನಿಯ ಕಲಾಪ್ರೇಮಿಗಳು ಮೆಚ್ಚಿಕೊಂಡರು. ಆಗ ಅವರ ವಯಸ್ಸು ಕೇವಲ ಹದಿನೆಂಟು. ಆವಾಗಲೇ ಅವರು ಬಣ್ಣ ಬ್ರಶ್‌ಗಳೊಂದಿಗೆ ಅದ್ಭುತವಾದ ನಂಟನ್ನು ಹೊಂದಿದ್ದರು.

## ಕಲಾಸಿದ್ಧಿ

ಗಜಾನನ ಮಹಾಲೆಯವರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಸಾಂಸಾರಿಕ ನಾಟಕಗಳ ಮೇಕಪ್ ಮಾಡುವುದರಲ್ಲಿ ಸಿದ್ಧಹಸ್ತರು.. ಶ್ರೀರಂಗರಿಗೆ ಮೇಕಪ್ ಮಾಡಿ ಶಹಬ್ಬಾಶ್‌ಗಿರಿ ಪಡೆದ ನಂತರ ಮತ್ತೆ ಪ್ರಸಾಧನ ಕಲೆಯಲ್ಲಿ ಐದು ದಶಕಗಳ ಕಾಲ ಹಿಂತಿರುಗಿ ನೋಡಿದವರಲ್ಲ. ಅವರು ಸೃಷ್ಟಿಸಿದ ಪಾತ್ರಗಳಿಗೆ ಲೆಕ್ಕವಿಲ್ಲ. ಹಣಕ್ಕಾಗಿ ಬೆನ್ನತ್ತಿದ್ದವರು ಅಲ್ಲ. ಧಾರವಾಡದ ಸುತ್ತಮುತ್ತಲ ಹಳ್ಳಿಗಳಲ್ಲಿ ಯಾವುದೇ ಜಾತ್ರೆ ನಡೆದಾಗ ಸಾಮಾನ್ಯವಾಗಿ ನಾಟಕಗಳನ್ನು ಆಡುವುದುಂಟು. ಆಗೆಲ್ಲ ಮೇಕಪ್ ಮಾಡುವ ಕುರಿತು ಗಜಾನನರಿಗೆ ಬುಲಾವ್ ಬರುತ್ತದೆ. ದೂರದೂರಗಳಿಂದ ಕರೆ ಬಂದಾಗ, ಕ್ಲುಪ್ತ ಸಮಯದಲ್ಲಿ ಹಾಜರಾಗಿ ತಮಗೊಪ್ಪಿಸಿದ ಹೊಣೆ ನಿಭಾಯಿಸಿದ್ದಾರೆ. ಬಸ್, ಟ್ರಕ್, ಟೆಂಪೋ, ಚಕ್ಕಡಿ ಗಾಡಿಗಳಲ್ಲಿ ತಮ್ಮ ಸರಂಜಾಮುಗಳನ್ನು ಕಟ್ಟಿಕೊಂಡು ಕರೆ ಬಂದಾಗಲೆಲ್ಲ ಧಾವಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟು, ಎಲ್ಲರಿಗೂ ಬೇಕಾದವರಾಗಿದ್ದಾರೆ.

ಗಜಾನನ ಮಹಾಲೆಯವರು ಸುಮಾರು ನಾಲ್ಕು ಸಾವಿರ ನಾಟಕಗಳಿಗೆ ಮೇಕಪ್ ಮಾಡಿದ್ದಾರೆ. ಈ ನಡುವೆ ಅವರು ಜೀವಾನುಭವದ ವಿಸ್ತಾರ, ಸಂಖ್ಯೆ ಬೆಳೆಸಿಕೊಂಡ ಸಂಘ,ಸಂಸ್ಥೆ, ವ್ಯಕ್ತಿಗಳು ಅಪಾರ. ಹಳ್ಳಿಯಿಂದ ದಿಲ್ಲಿಯ ವರೆಗೆ ಸುತ್ತಾಡಿ ಕಲಾರಂಗದ ಒಳಹೊರಗನ್ನು ಅರಿತಿದ್ದಾರೆ. ಬಣ್ಣ ಹಚ್ಚುವ ತಂತ್ರಗಾರಿಕೆಯನ್ನು ಎಲ್ಲೆಡೆ ಸೂಕ್ಷ್ಮವಾಗಿ ಅವಲೋಕಿಸಿ ಕಲಿತುಕೊಂಡು ಒಬ್ಬ ಶ್ರೇಷ್ಠ ತಂತ್ರಜ್ಞರಾಗಿದ್ದಾರೆ. ತಮ್ಮದನ್ನು ಇತರರ ಮೇಲೆ ಹೇರದೆ ಇತರರ ಸೂಕ್ಷ್ಮ ರೀತಿ ನೀತಿಗಳನ್ನು ಸೂಕ್ಷ್ಮವಾಗಿ ಅರ್ಥೈಸಿಕೊಂಡಿದ್ದಾರೆ. ಅವುಗಳನ್ನು ತಮ್ಮ ಕಲೆಯಲ್ಲಿ ಅಳವಡಿಸಿಕೊಂಡು ತುಂಬಿದ ಕೊಡವಾಗಿದ್ದಾರೆ.

ಹಳ್ಳಿಗಳಲ್ಲಿ ಮಾಡುವ ನಾಟಕದ ಮೇಕಪ್, ನಗರದಲ್ಲಿ ಅಭಿನಯಿಸುವ ನಾಟಕಗಳಿಗೆ ಮಾಡುವ ಮೇಕಪ್ ಮತ್ತು ಕ್ಯಾಮರಾ ಕಣ್ಣಿಗೆ ತಕ್ಕ ಹಾಗೆ ಮಾಡುವ ಮೇಕಪ್‌ಗಳಿಗೆ ಬಹಳೇ ವ್ಯತ್ಯಾಸವುಂಟು. ಮಹಾಲೆಯವರು ಮೂರೂ ಪ್ರಕಾರಗಳಲ್ಲಿ ಪರಿಣತಿಯನ್ನು ಪಡೆದಿದ್ದಾರೆ.

ಹಳ್ಳಿಗಳಲ್ಲಿ ಮಾಡುವ ನಾಟಕಗಳಿಗೆ 'ರಫ್' ಮೇಕಪ್ ಬೇಕು, ನಗರಗಳಲ್ಲಿ ಇರುವ ಹಾಗೆ ಹಳ್ಳಿಗಳಲ್ಲಿ ರಂಗ ಮಂದಿರಗಳಿರುವುದಿಲ್ಲ. ಝಗಝಗಿಸುವ ಬೆಳಕಿನ ತಂತ್ರಗಾರಿಕೆಯನ್ನು ಹಳ್ಳಿಗಳಲ್ಲಿ ಉಪಯೋಗಿಸುವುದಿಲ್ಲ. ಆದ್ದರಿಂದ ಅಲ್ಲಿ ರಫ್ ಮೇಕಪ್ಪೇ ಬೇಕು. ದಪ್ಪವಾಗಿ ಬಣ್ಣ ಹಚ್ಚಿದರೆ ಭಲೋ ಅಂತಾರೆ, ಸಿಳ್ಳು ಕೇಕೆ ಹೆಚ್ಚು ಕೇಳಿಸುತ್ತವೆ. ಹವ್ಯಾಸಿ ತಂಡಗಳ ಆಧುನಿಕ ಪ್ರಯೋಗಗಳಿಗೆ 'ಲೈಟ್ ಮೇಕಪ್' ಸಾಕು. ಏಕೆಂದರೆ ಅಲ್ಲಿ ನೈಜತೆಗೆ ಪ್ರಾಧಾನ್ಯತೆ ಇರುತ್ತದೆ. 'ಅನುಭವದ ಆಧಾರದ ಮೇಲೆ ಮೇಕಪ್ ಕಲೆಯಲ್ಲಿ ನಾನು ಸುಧಾರಣೆಗಳನ್ನು ಮಾಡಿದ್ದೇನೆ ಇದನ್ನೇ ಹೊಸ ಪ್ರಯೋಗ ಅಂತ ಕರೆದು ಹಣೆಪಟ್ಟಿ ಹಚ್ಚಿಕೊಳ್ಳುವುದು ನನಗಿಷ್ಟವಿಲ್ಲ' ಎಂದು ಮಹಾಲೆಯವರು ವಿನಯಪೂರ್ವಕವಾಗಿ ಹೇಳುತ್ತಾರೆ.

## ಪ್ರಸಾಧನ ಪ್ರಯೋಗಗಳು

ಕಲೆ ನಿಂತ ನೀರಲ್ಲ, ಕಾಲಮಾನಕ್ಕೆ ತಕ್ಕಂತೆ ಬದಲಾವಣೆ ಆಗುತ್ತಿರುತ್ತದೆ. ಅದೇ ರೀತಿ ಪ್ರಸಾಧನ ಕಲೆಯೂ ಸಹ ಸಾಕಷ್ಟು ಬದಲಾವಣೆ ಹೊಂದಿದೆ. ದಶಕಗಳ ಹಿಂದಿನ ಮೇಕಪ್ ಸಂಪ್ರದಾಯಕ್ಕೂ ಇಂದಿನ ವಿಧಾನಕ್ಕೂ ಬಹಳ ವ್ಯತ್ಯಾಸ ಇದೆ ಎನ್ನುತ್ತಾರೆ ಮಹಾಲೆಯವರು. ವೈಟ್ ಜಿಂಕ್, ತೀಕ ಕಲರ್ (ಹಳದಿ) ಹಾಗೂ ಕೆಂಪು (ಇಂಗಳಿಕ) ಇವುಗಳನ್ನೆಲ್ಲ ಹಿಂದೆ ಮೇಕಪ್ ಮಾಡುವಾಗ ವ್ಯಾಸಲೀನ್ ಅಥವಾ ಕೊಬ್ಬರಿ ಎಣ್ಣೆಯಲ್ಲಿ ಬೆರೆಸಿ ಉಪಯೋಗಿಸುತ್ತಿದ್ದರು. ಪಾತ್ರಧಾರಿಗಳ ಚರ್ಮದ ಬಣ್ಣಕ್ಕೆ ಹೊಂದಿಕೆಯಾಗುವಂತೆ ಮಿಕ್ಸಿಂಗ್ ಮಾಡುತ್ತಿದ್ದರು.

ಹುಬ್ಬು ತೀಡಲು, ಮೀಸೆ ಬರೆಯಲು ಬೇಕಾಗುವ ಕಪ್ಪು ಬಣ್ಣಕ್ಕಾಗಿ ಚಿಮಣಿಯನ್ನು ತಗಡಿಗೆ ಹಿಡಿದು ಹೊಗೆಯಿಂದ ಬರುವ ಕಾಡಿಗೆಯನ್ನು ಉಪಯೋಗಿಸುತ್ತಿದ್ದರು. ಮೀಸೆ ಗಡ್ಡಕ್ಕಾಗಿ ಕುರಿಯ ಕೂದಲನ್ನು ಕತ್ತರಿಸಿ ಉಪಯೋಗಿಸುತ್ತಿದ್ದರು. ಮಹಾಲೆಯವರು ತಮಗೆ ಬೇಕಾದ ಬಣ್ಣದ ಸಾಮಗ್ರಿಗಳನ್ನು ಧಾರವಾಡದ ಜವಳಿ ಪೇಟೆಯ ಜಾನಕಿ ಅಂಗಡಿಯಿಂದ ಖರೀದಿಸುತ್ತಿದ್ದರು. ಆ ಕಾಲದಲ್ಲಿ ಅದೊಂದು ಅಂಗಡಿಯಲ್ಲಿಯೇ ಬಣ್ಣದ ಪರಿಕರಗಳಾದ ಸ್ಪಿರೀಟ್, ರಾಳ ಮುಂತಾದವುಗಳು ಸಿಗುತ್ತಿದ್ದವು. ಈಗೆಲ್ಲ ಬಣ್ಣಗಾರಿಕೆ ಸಾಮಾನುಗಳೆಲ್ಲ ಟ್ಯೂಬುಗಳಲ್ಲಿಯೇ ಲಭ್ಯ. ೨೫ ರಿಂದ ೩೬ ರ ವರೆಗೆ ನಂಬರಗಳಿದ್ದು 'ಪ್ಯಾನ್ ಕೇಕ್' ಬೇಕಾದಲ್ಲಿ ಸಿಗುತ್ತವೆ.

ಮೇಕಪ್ ಮಾಡುವಾಗ ಪಾತ್ರ ನಿರ್ವಹಿಸುವ ಕಲಾವಿದನ ವಯಸ್ಸು ಹಾಗೂ ಪಾತ್ರದ ವಯಸ್ಸನ್ನು ಗಮನಿಸಬೇಕಾಗುತ್ತದೆ. ಜೊತೆಗೆ ಕಲಾ ನಿರ್ದೇಶಕನ ಮನದಿಚ್ಛೆಯನ್ನು ಅರಿತು ಅವನ ಭಾವನೆಗಳಿಗೆ ಪೂರಕವಾಗಿ ಪ್ರಸಾಧನ ಮಾಡಬೇಕಾಗುತ್ತದೆ. ಕಲಾವಿದನ ಚರ್ಮದ ಬಣ್ಣ, ಮುಖದ ಚಹರೆ ಪಟ್ಟಿಯನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇವೆಲ್ಲವುಗಳನ್ನು ಸೋಸಿ ಹೊರತೆಗೆದ ರಸಪಾಕವೇ ಉತ್ತಮ ಪ್ರಸಾದನಿಕ ಅದು ಸಿದ್ಧಿಸುವದು ಗಜಾನನ ಮಹಾಲೆಯವರಂಥ ರಸರುಷಿಗಳಿಗೆ ಮಾತ್ರ.

ಮಹಾಲೆಯವರ ಪ್ರಸಾಧನ ಕಲೆಗೆ ಸಾಕಷ್ಟು ಜನ ಪ್ರಭಾವವನ್ನು ಬೀರಿದ್ದಾರೆ. ಅಂತಹ ಮಹಾನುಭಾವರಲ್ಲಿ ವೃತ್ತಿರಂಗಭೂಮಿಯ ಪ್ರಸಿದ್ಧ ಕಲಾವಿದರಾದಂತಹ ಏಣಗಿ ಬಾಳಪ್ಪನವರು ಒಬ್ಬರು. ಅವರ ಬಸವೇಶ್ವರ ನಾಟಕದಿಂದ ಪ್ರಭಾವಿತರಾಗಿ ಮಹಾಲೆಯವರು ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳಿಗೆ ಯಾವ ರೀತಿ ಬಣ್ಣ ಪ್ರಯೋಗ ಮಾಡಬೇಕು, ಅದರಲ್ಲಿ ಬರುವ ಸ್ಟೈಲಿಶ್ ಮೇಕಪ್, ಕ್ಯಾರೆಕ್ಟರ್ ಮೇಕಪ್, ಟ್ರೆಜೆಡಿ ಮೇಕಪ್, ಸ್ಟೇಜ್ ಮೇಕಪ್ಪುಗಳ ಕುರಿತು ಅವರಿಂದ ಸಂಪೂರ್ಣ ಮಾಹಿತಿಯನ್ನು ಪಡೆದು ಪರಿಪೂರ್ಣತೆ ಮತ್ತು ಪಾದಾರ್ಪಣೆ ಮಾಡಿದ್ದಾರೆ.

## ಪ್ರಸಾಧನವೂ ದೇವಪೂಜೆ

ಪ್ರಸಾಧನ ಕಲೆಯಲ್ಲಿ ಮಹಾಲೆಯವರಿಗೆ ಬಾಲ್ಯದಲ್ಲಿ ಕಲಿಸಿದ ತಂದೆಯ ಹೊರತು ಬೇರೆ ಯಾವ ಗುರು ಇರಲಿಲ್ಲ. ವ್ಯವಸ್ಥಿತವಾಗಿ ಕಲಿಯಲು ಭದ್ರವಾದ ಆರ್ಥಿಕ ಸ್ಥಿತಿಯೂ ಇರಲಿಲ್ಲ. ಸಿಕ್ಕ ಸಂದರ್ಭಗಳನ್ನು ಸಮರ್ಥವಾಗಿ ಬಳಸಿಕೊಂಡು ಅನೇಕ ವಿದ್ಯೆಗಳನ್ನು ಕರಗತ ಮಾಡಿಕೊಂಡರು. ಕುರಿತೋದದೆಯುಂ ಪ್ರಸಾಧನ ಕಲಾ ಪ್ರಯೋಗ ಪರಿಣಿತರಾಗಿದ್ದಾರೆ. ಅವರ ಯಶಸ್ಸಿಗೆ ಮುಖ್ಯವಾಗಿ ಎರಡು ಕಾರಣಗಳು. ಮೊದಲನೆಯದು ಶ್ರದ್ಧೆ, ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಸಾಕಷ್ಟು ಏಳುಬೀಳುಗಳನ್ನು ಕಂಡರೂ

ತಾವು ನಂಬಿದ ಕಲಾ ದೇವಿಗೆ ಸಂಪೂರ್ಣ ನಿಷ್ಠೆಯನ್ನು ತೋರಿದರು. ಎರಡನೆಯದು ಶಿಸ್ತು. ತಮ್ಮಿಂದ ಕಾರ್ಯಕ್ರಮಗಳ ಸಂಘಟಕರಿಗೆ ಸಮಾರಂಭದ ವ್ಯವಸ್ಥಾಪಕರಿಗೆ ಯಾವುದೇ ರೀತಿಯ ತೊಂದರೆಯಾಗಬಾರದೆಂದು ಹೇಳಿದ ಸಮಯಕ್ಕೆ ಎಷ್ಟೇ ಅನಾನುಕೂಲವಿದ್ದರೂ ಚಾಚೂ ತಪ್ಪದೇ ಹಾಜರಾಗುತ್ತಿದ್ದರು. ಎಲ್ಲ ಹಿರಿಕಿರಿಯರನ್ನು ಒಂದೇ ಭಾವನೆಯಿಂದ ನೋಡುತ್ತಾ ಕಲಾವಿದರಿಗೆ ಕೂಡಾ ಪ್ರೀತಿಯಿಂದ ಮಾತನಾಡುತ್ತಾ ಕರ್ತವ್ಯ ನಿರ್ವಹಿಸುವಾಗ ಮೇಕಪ್ ರೂಮನ್ನು ದೇವರ ಕೋಣೆಯೆಂದೇ ಪರಿಗಣಿಸಿ ಸದ್ದು ಗದ್ದಲಕ್ಕೆ ಅವಕಾಶ ನೀಡದೆ ಸೇವೆ ಮಾಡಿದ್ದರಿಂದ ಕಲಾದೇವಿ ಅವರಿಗೆ ಒಲಿದಿದ್ದಾಳೆ. ಇವರ ಕಲಾರಾಧನೆಯನ್ನು ಕಂಡು ಮೇಕಪ್ ಮುಗಿಸಿದ ಕಲಾವಿದರು ಕಾಲು ಮುಟ್ಟಿ ಭಕ್ತಿಯಿಂದ ನಮಸ್ಕರಿಸುತ್ತಾರೆ.

ಪ್ರಸಾಧನ ಕಲೆಯಲ್ಲಿ ಗಜಾನನ ಮಹಾಲೆಯವರು ಮನೆಮಾತಾಗಿ ಹುಬ್ಬಳ್ಳಿ,ಧಾರವಾಡ ಅವಳಿ ನಗರದಲ್ಲಿ ಯಾವ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದರೂ ಅಲ್ಲಿ ಮಹಾಲೆಯವರ ಉಪಸ್ಥಿತಿ ಬೇಕೇ ಬೇಕು ಅನ್ನುವಂತಹ ಸ್ಥಿತಿ.

ಮಹಾಲೆಯವರ ಮೇಕಪ್ ಬಹಳ ಸರಳ. ಬಣ್ಣಗಳನ್ನು ಹಿತಮಿತವಾಗಿ ಬಳಸಿ ಸಹಜ ಸೌಂದರ್ಯಕ್ಕೆ ಒತ್ತು ಕೊಟ್ಟು ರಸಪುಷ್ಟಿಗೆ ಪೂರಕವಾಗುವಂತೆ ಪಾತ್ರಗಳನ್ನು ಸೃಷ್ಟಿಸುತ್ತಾರೆ. ಸನ್ನಿವೇಷಕ್ಕೆ ತಕ್ಕ ವೇಷಭೂಷಣ, ವಸ್ತ್ರವಿನ್ಯಾಸಗಳನ್ನು ಅಳವಡಿಸುತ್ತಾರೆ. ಪಾತ್ರವನ್ನು ಅಭ್ಯಸಿಸಿ ನಿರ್ದೇಶಕನ ಕಲ್ಪನೆಯನ್ನು ಆಸ್ವಾದಿಸಿಕೊಂಡು ಪ್ರಸಾಧನ ಮಾಡುತ್ತಾರೆ. ಕೇವಲ ನಾಟಕದ ಪಾತ್ರಗಳಿಗೇ ಅಲ್ಲದೇ ನೃತ್ಯಸ್ಪರ್ಧೆ, ಭರತನಾಟ್ಯ, ರಂಗಪ್ರವೇಶ, ನೃತ್ಯಶಾಲೆಯ ವಾರ್ಷಿಕೋತ್ಸವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ ಮುಂತಾದವುಗಳಿಗೆ ಮಹಾಲೆಯವರ ಕೈಚಳಕ ಅನಿವಾರ್ಯ. ಆದರೆ ಇವರಿಗೆ ಸಂಭಾವನೆ ಮಾತ್ರ ಅನಿವಾರ್ಯವಲ್ಲ. ಇಂತಿಷ್ಟು ಕೊಡಿ ಎಂದು ಎಂದೂ ಬಾಯ್ಬಿಟ್ಟು ಕೇಳಿದವರಲ್ಲ. ಲಕೋಟೆಯಲ್ಲಿಟ್ಟು ಕೊಟ್ಟಿದ್ದೇ ಹೆಚ್ಚು. ಅಷ್ಟೊಂದು ಸರಳ ಮನುಷ್ಯ. ಸಮಾರಂಭ ಯಶಸ್ವಿಯಾಗಿ ಜರುಗಿತೆಂದರೆ ಅದೇ ಅವರ ಸಂಭಾವನೆ. ಅಂತಹ ಧನ್ಯತೆ ಅರ್ಪಣಾ ಮನೋಭಾವ ಕಲಾದೇವಿಗೆ.

## ಬಹುಮುಖ ಪ್ರತಿಭಾವಂತ

ಮಹಾಲೆಯವರು ಕೇವಲ ಪ್ರಸಾಧನಾ ಕಲಾವಿದರಾಗಿ ತಮ್ಮ ಸೇವೆಯನ್ನು ಮುಡುಪಾಗಿಟ್ಟವರಲ್ಲ. ಅಗತ್ಯ ಬಿದ್ದಾಗ ಕರ್ಟನ್ ಜಗ್ಗುವುದರಿಂದ ಹಿಡಿದು ಹಾರ್ಮೋನಿಯಂ ನುಡಿಸುವುದರವರೆಗೆ ಅವರು ಲಭ್ಯ. ಹೀಗೆ ಆಪದ್ಬಾಂಧವರಂತೆ ಒದಗಿ ಬಂದು ಪ್ರದರ್ಶನದ ಒಟ್ಟು ಯಶಸ್ಸಿಗೆ ಸಹಕರಿಸುತ್ತಿದ್ದರು.

ಮಹಾಲೆಯವರಿಂದ ಮೇಕಪ್ ಮಾಡಿಸಿಕೊಂಡವರು ತಮ್ಮ ಪ್ರತಿಭೆ ಮೆರೆದು ಪ್ರೇಕ್ಷಕರಿಂದ ಚಪ್ಪಾಳೆ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ. ರಾಜ್ಯ, ರಾಷ್ಟ್ರಮಟ್ಟದಲ್ಲಿ ಹೆಸರು ಪಡೆದಿದ್ದಾರೆ. ನಾಯಕ, ಖಳನಾಯಕ, ಭಿಕ್ಷುಕ, ರಾಜಮಹಾರಾಜರಾಗಿ ಮೆರೆದು ಪ್ರೇಕ್ಷಕರ ಮನೋಭಾವನೆಗಳ ಮೇಲೆ ಮೆರೆದಾಡಿದ್ದಾರೆ. ಇವರನ್ನು ಕಟೆದ ಅದ್ಭುತ ರೂವಾರಿ ಗಜಾನನ ಮಹಾಲೆಯವರು. ನಾಟಕ ರಂಗವೆಂದರೆ ಥಳಕು ಬಳುಕಿನ ಅದ್ಭುತ ರಸಾಯನ. ಅಲ್ಲಿ ಕಣ್ಮುಂದೆ ಇರುವವರಿಗೆ ಮಾತ್ರ ಹಣ, ಹೆಸರು. ನೇಪಥ್ಯದಲ್ಲಿರುವವರು ಬೆಳಕಿಗೆ ಬರುವುದು ಬಹಳ ಅಪರೂಪ. ದೇವಸ್ಥಾನಕ್ಕೆ ಹೋಗುವವರು ದೇವರ ಭವ್ಯ ಮೂರ್ತಿಯನ್ನು ಕಂಡು ತನ್ಮಯರಾಗಿ ಭಕ್ತಿಯಿಂದ ತಲೆಬಾಗುವವರು ಬಹಳ ಜನ. ಆದರೆ ಆ ದಿವ್ಯ ಮೂರ್ತಿಯನ್ನು ಕಡೆದವರನ್ನು ನೆನೆಯುವುದು ಬಹಳ ವಿರಳವಲ್ಲವೇ. ಹಾಗೆಯೇ ಮಹಾಲೆಯವರ ಕಲಾಸೇವೆ, ಸಾಮಾನ್ಯರನ್ನು ಅಸಾಮಾನ್ಯರ ಹಾಗೆ ತೆರೆಯ ಮೇಲೆ ಮೆರೆಸುವ ಪ್ರಸಾಧನ ತಂತ್ರಜ್ಞರನ್ನು, ಬೆಳಕಿಗೆ ತರುವುದು ಅತ್ಯಂತ ವಿರಳ. ೫೦ ವರ್ಷಗಳ ಕಾಲ ಅವಿರತವಾಗಿ ಕಲಾ ಸೇವೆಗಾಗಿ ಶ್ರಮಿಸಿ ಸ್ಫಟಿಕದಂತೆ ಹೊರಬಂದಿದ್ದಾರೆ ಮಹಾಲೆಯವರು, ಸ್ವಧರ್ಮೆ ನಿಧನಂ ಶ್ರೇಯಃ ಎಂಬ ಧ್ಯೇಯೋಕ್ತಿಯಂತೆ ನಡೆದು ಬಾಳಿದ ನಿಷ್ಕಾಮ ಕರ್ಮಯೋಗಿಗಳವರು.

ಮಹಾಲೆಯವರಿಗೆ ರಂಗ ಸೇವೆ ಮಾಡುವಾಗ ಸಾಕಷ್ಟು ವಿಷಾದ, ವಿಪರ್ಯಾಸದ ಸಂಗತಿಗಳು ಬಂದಿದ್ದಿವೆ, ಧನ್ಯವಾದವಿಲ್ಲದೆ, ಸಂಭಾವನೆಯೂ ಇಲ್ಲದೆ, ಅವರಿಗೆ ಐದಾರು ತಾಸು ಕೆಲಸ ಮಾಡಿಸಿಕೊಂಡು ಅತಿ ವಿನಯದ ತೋರಿಕೆಯ ಮಾತುಗಳನ್ನಾಡಿ ವಂಚಿಸಿದ ಮಹಾನುಭಾವರು ಸಹ ಭೆಟ್ಟಿಯಾಗಿದ್ದಾರೆ. ಅವರು ತಂಗುವ ಊಟೋಪಚಾರದ ವ್ಯವಸ್ಥೆ, ಮೋಟಾರು ವಾಹನದ ವ್ಯವಸ್ಥೆ ಮಾಡದೆ ಅಲಕ್ಷಿಸಿದಾಗ ತಮ್ಮ ಭಾರದ ಬ್ಯಾಗ್ ಹೊತ್ತು ಜೇಬಿನಿಂದ ಹಣ ಖರ್ಚು ಮಾಡಿ ಮರಳಿ ಬಂದ ಪ್ರಸಂಗಗಳೆಷ್ಟೋ. ಕಾಲಚಕ್ರಕ್ಕೆ ಅಂಟಿಕೊಂಡೇ ಇರುವ ಮಹಾಲೆಯವರು ಮುಂಜಾನೆ ಹಾವೇರಿಯಲ್ಲಿದ್ದವರು ಸಂಜೆ ಬೆಳಗಾವಿಯಲ್ಲಿರುತ್ತಾರೆ. ಮರುದಿನ ಬೆಳಿಗ್ಗೆ ಗದುಗಿಗೆ ತೆರಳಿದರೆ ಸಾಯಂಕಾಲ ದಾವಣಗೆರೆಯಲ್ಲಿ ಹಾಜರಿರುತ್ತಾರೆ. ಈ ರೀತಿ ಯಾವಾಗಲೂ ಬಿಜಿಯಾಗಿರುತ್ತಾರೆ. ಅವರನ್ನು ಸಂಪರ್ಕಿಸುವುದು ಇನ್ನೂ ಕಠಿಣ ಮನೆಯಲ್ಲಿರುವುದಕ್ಕಿಂತ ಹುಬ್ಬಳ್ಳಿಯ 'ಸವಾಯಿ ಗಂಧರ್ವ ಕಲಾ ಮಂದಿರ' ಹಾಗೂ 'ಡಾ. ಮಲ್ಲಿಕಾರ್ಜುನ ಮನ್ಸೂರ ಕಲಾಭವನ'ಗಳೇ ಇವರ ಖಾಯಂ ವಾಸಸ್ಥಾನ. ಅಷ್ಟೊಂದು ಅವಿನಾಭಾವ ಸಂಬಂಧ ಮಹಾಲೆಯವರಿಗೆ.

## ಗಜಾನನ ಕಲಾವಿದರಾಗಿ

ಮಹಾಲೆಯವರು ಇಡೀ ನಾಟಕ ರಂಗದ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಎಲ್ಲಾ ರಂಗಕರ್ಮಿಗಳ ಪ್ರೀತಿ ವಿಶ್ವಾಸ ಗಳಿಸಿದ್ದಾರೆ. ವೃತ್ತಿರಂಗಭೂಮಿಯೇ ಆಗಿರಲಿ ಹವ್ಯಾಸಿ ರಂಗಭೂಮಿಯೇ ಆಗಿರಲಿ ಇವರ ಸೇವೆ ಅತ್ಯಗತ್ಯ. ಬಡತನದಲ್ಲಿ ಬೆಳೆದ ಇವರಿಗೆ ಸ್ವಾಭಿಮಾನ ಬಹಳ. ಇನ್ನೊಬ್ಬರ ಹಂಗಿನಲ್ಲಿ ಬೆಳೆಯಲಿಲ್ಲ. ಇನ್ನೊಬ್ಬರ ಕೆಲಸವನ್ನು ಕಸಿದುಕೊಳ್ಳಲಿಲ್ಲ. ಈ ಬಡ ಕಲಾವಿದ ಕಲಾ ಭಂಡಾರಿಯಾಗಿ ಬೆಳೆದದ್ದು ಒಂದು ಯಶೋಗಾಥೆ. ಕೆಸರಿನ ಕಮಲದಂತೆ ಮನೆಯ ಚಿಂತೆಗಳನ್ನು ತಮ್ಮ ಕಲಾ ಸೇವೆಗೆ ಎಂದೂ ಅಂಟಿಸಿದವರಲ್ಲ. ಕಾಯಕ ನಿಷ್ಠೆ ಬಿಡಲಿಲ್ಲ. ಎಂತಹ ಪರಿಸ್ಥಿತಿಗಳು ಬಂದಾಗಲೂ ನಂಬಿದ ಮೌಲ್ಯಗಳನ್ನು ತುಳಿಯಲಿಲ್ಲ. ತನ್ನವರಿಂದಲೇ ತುಳಿತಕ್ಕೊಳಗಾದರೂ ಜೀವನ ಪ್ರೀತಿಯಿಂದ ವಿಮುಖರಾಗಲಿಲ್ಲ. ಸೃಜನಶೀಲ ಮನಸ್ಸು ಎಲ್ಲಾ ಬೇಲಿಗಳನ್ನು ಹಾರುತ್ತದೆಯಲ್ಲವೆ, ವಾಮನ ಹೆಜ್ಜೆ ಅಗಾಧವಾಗಿ ವ್ಯಾಪಿಸಿ ಸ್ವತಃ ತಾವೇ ಆಶ್ಚರ್ಯಪಡುವಂತೆ ಬೆಳೆದಿದ್ದಾರೆ. ಇದು ಹೇಗಾಯಿತೆಂದು ಅವರಿಗೆ ತಿಳಿಯದು. ಇದರ ಬಗ್ಗೆ ವಿಮರ್ಶಿಸುವ, ವಿಶ್ಲೇಷಿಸುವ, ವಿವೇಚಿಸಿ ವಿಚಾರಿಸುವ ವ್ಯವಧಾನವೂ ಅವರಿಗಿಲ್ಲ. ರಂಗ ಮಂದಿರದಲ್ಲಿ ನಾಟಕದ ಪಾತ್ರಗಳ ಚಿಂತೆಯಾದರೆ ಮನೆಯಲ್ಲಿ ಹಸಿವಿನ ಪಾತ್ರೆಯ ಬಗ್ಗೆ ಚಿಂತೆ. ಒಂದರಲ್ಲಿ ವ್ಯಸ್ತರಾದಾಗ ಇನ್ನೊಂದರ ಬಗ್ಗೆ ಪ್ರಜ್ಞೆಯೇ ಇರುತ್ತಿರಲಿಲ್ಲ. ಅಷ್ಟೊಂದು ಸ್ಥಿತಪ್ರಜ್ಞರಾಗಿದ್ದರು, ಅಜಾತಶತ್ರುವಾಗಿದ್ದಾರೆ.

## ಚಲನಚಿತ್ರಗಳಲ್ಲಿ ಚಲನಶೀಲ

ಮಹಾಲೆಯವರ ಕಲೆ ಪ್ರಸಿದ್ಧ ಸಿನಿಮಾ ರಂಗಕ್ಕೂ ಪಸರಿಸಿದೆ. ಅಲ್ಲಿಯೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಚಲನಚಿತ್ರಗಳಲ್ಲಷ್ಟೇ ಅಲ್ಲದೆ ದೂರದರ್ಶನದಲ್ಲೂ ಕೂಡಾ ತಮ್ಮ ಕೈಚಳಕವನ್ನು ತೋರಿಸಿದ್ದಾರೆ. ಕನ್ನಡ ಚಲನ ಚಿತ್ರ ತಯಾರಿಕೆ ಬೆಂಗಳೂರು, ಮೈಸೂರು ನಗರಗಳಲ್ಲಿ ಹೆಚ್ಚಾಗಿದೆ. ಕನ್ನಡ ಚಿತ್ರೋದ್ಯಮ, ಕಿರುತೆರೆಯ ಧಾರಾವಾಹಿ ಮುಂತಾದವುಗಳ ಕೇಂದ್ರ ತಾಣ ರಾಜ್ಯದ ರಾಜಧಾನಿ ಬೆಂಗಳೂರೇ ಆಗಿದ್ದು ಉತ್ತರ ಕರ್ನಾಟಕದಲ್ಲಿ ಅದು ಅಷ್ಟಕ್ಕಷ್ಟೇ. ಹುಬ್ಬಳ್ಳಿ, ಧಾರವಾಡ, ಗುಲ್ಬರ್ಗಾ ನಗರಗಳಲ್ಲಿ ಚಲನಚಿತ್ರಗಳ ನಿರ್ಮಾಣ, ವಿತರಣೆ, ಪ್ರದರ್ಶನ ತಕ್ಕಮಟ್ಟಿಗೆ ನಡೆಯುತ್ತಿದೆ. ಹೀಗಾಗಿ ಉತ್ತರ ಕರ್ನಾಟಕದ ಕಲಾವಿದರಿಗೆ ಬೆಂಗಳೂರು ದೂರದ ಊರು, ಬೇಡಿಕೆಯೂ ಅತ್ಯಲ್ಪ. ಕನ್ನಡ ಚಲನಚಿತ್ರ ನಿರ್ಮಾಣ ಸಂಸ್ಥೆಯವರು ಹೆಚ್ಚಾಗಿ ಬೆಂಗಳೂರು ಮೈಸೂರಿನ ಕಲಾವಿದರು, ತಂತ್ರಜ್ಞರನ್ನೇ ಅವಲಂಬಿಸಿದ್ದಾರೆ. ಪ್ರಸಾಧನಕ್ಕೂ ಸಹ ಅಲ್ಲಿಯ ಕಲಾವಿದರೇ ಬೇಕು. ಇಂಥ ವಾತಾವರಣದಲ್ಲೂ ಕೂಡಾ ಮಹಾಲೆಯವರು ಕನ್ನಡ ಚಲನಚಿತ್ರಗಳಿಗೆ

ದೂರದರ್ಶನದ ಧಾರಾವಾಹಿಗಳಿಗೆ ಮೇಕಪ್ ಮಾಡಿದ್ದಾರೆ. 'ಸಂಗೊಳ್ಳಿ ರಾಯಣ್ಣ', 'ವಿಜಯ ಕಂಕಣ', 'ಶೋಷಣೆ' ಮುಂತಾದ ಕನ್ನಡ ಚಲನಚಿತ್ರಗಳ ಪಾತ್ರಧಾರಿಗಳಿಗೆ ಮೇಕಪ್ ಮಾಡಿದ್ದಾರೆ. 'ಮಾನಸ', 'ಮೈಲಾರ ಮಹಾದೇವ', 'ಗೌರೀ' ಮುಂತಾದ ಕಿರುತೆರೆಯ ಧಾರಾವಾಹಿಗಳ ಪ್ರಸಾಧನ ಕಲಾವಿದರಾಗಿ ದುಡಿದಿದ್ದಾರೆ. ನಾಟಕಾಲಂಕಾರ, ಗದುಗಿನ ಕಲಾ ಗಾರುಡಿಗ, ಗರುಡ ಸದಾಶಿವರಾಯರ ಬಗೆಗಿನ ಸಾಕ್ಷ್ಯ ಚಿತ್ರಕ್ಕೆ ಇವರದೇ ಪ್ರಸಾಧನ. ಸುರೇಶ ಹೆಬ್ಳೀಕರ ನಿರ್ದೇಶನದ 'ಚಮತ್ಕಾರ', ಚಲನಚಿತ್ರದಲ್ಲಿ ಮಲ್ಲೇಶಿಯ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಈ ರಂಗದಲ್ಲಿ ಕೂಡಾ ಮಹಾಲೆಯವರ ಮುಗ್ಧತೆಯ ದುರುಪಯೋಗ ಪಡೆದುಕೊಂಡವರುಂಟು. ಅರ್ಧದಲ್ಲೇ ಕೈಬಿಟ್ಟವರಿದ್ದಾರೆ. ದುಡಿಸಿಕೊಂಡು ಬೇರೆಯವರ ಹೆಸರನ್ನು ಬೆಳ್ಳಿ ತೆರೆಯಮೇಲೆ ಮೂಡಿಸಿದವರಿದ್ದಾರೆ.

ಗಜಾನನ ಮಹಾಲೆಯವರು ಕಲಾ ಸೇವೆಯನ್ನು ಮಾಡುವುದರ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಹ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಧಾರವಾಡದಲ್ಲಿ 'ಅರುಣೋದಯ ಹವ್ಯಾಸಿ ಕಲಾ ಸಂಘ'ದ ಗೌರವಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದರ ಅಧ್ಯಕ್ಷರು ದೇವಪ್ಪ ನಾಯಕ ಅವರಿದ್ದು, ಕಾರ್ಯದರ್ಶಿ ಬಾಬು ಪಾಟೀಲ, ಸಾಂಸ್ಕೃತಿಕ ಕಾರ್ಯದರ್ಶಿ ಅನಿಲ್ ದೇಸಾಯಿ, ಖಜಾಂಚಿ ಮಗ ಸಂತೋಷ ಮಹಾಲೆ. ಅದೇ ರೀತಿ ಪ್ರಜ್ವಲ ಕೊಂಕಣಿ ಹವ್ಯಾಸಿ ಕಲಾ ಸಂಘದ ಅಧ್ಯಕ್ಷರಾಗಿ ಗಜಾನನ ಮಹಾಲೆಯವರು ಸೇವೆ ಸಲ್ಲಿಸುತ್ತಿದ್ದಾರೆ. ಇದರ ಕಾರ್ಯದರ್ಶಿ ಬಾಬು ಪಾಟೀಲ, ಕೋಶಾಧಿಕಾರಿ ಸಂತೋಷ ಮಹಾಲೆಯವರಿದ್ದಾರೆ.

## ಅರಸಿ ಬಂದ ಪ್ರಶಸ್ತಿಗಳು

ಗಜಾನನ ಮಹಾಲೆಯವರು ಎಂದೂ ಪ್ರಶಸ್ತಿಗಳ ಬೆನ್ನಟ್ಟಿದವರಲ್ಲ. ಪದಕ ಪ್ರಚಾರಗಳಿಗೋಸ್ಕರ ಎಂದೂ ದುಡಿದವರಲ್ಲ. ಅವುಗಳಿಗಾಗಿ ಪ್ರಭಾವ ವಶೀಲಿಗಳನ್ನು ಮಾಡಿದವರಲ್ಲ. 'ಮಾ ಫಲೇಷು ಕದಾಚನ' ಎಂಬ ತತ್ವಕ್ಕೆ ಕಟಿಬದ್ಧರಾಗಿ ಜೀವನ ಸಾಗಿಸಿದ್ದಾರೆ. ಎಲ್ಲರೊಂದಿಗೆ ಬೆರೆತು, ಎಲ್ಲರಿಗೂ ಬೇಕಾದವರು ಕ್ರಮೇಣ ಫಲಕ ಪ್ರಶಸ್ತಿಗಳೇ ಮಹಾಲೆಯವರಿಗೆ ಬೆನ್ನು ಹತ್ತಿದವು. ಸಭೆ ಸಮಾರಂಭಗಳಲ್ಲಿ ಇವರನ್ನು ಕರೆದು ಅನೇಕ ಸಂಘ ಸಂಸ್ಥೆಗಳು ಸತ್ಕಾರ ಮಾಡಿವೆ. ೧೯೮೭ ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರವನ್ನು ಪಡೆದಿದ್ದಾರೆ. ಇಂಥ ಸೃಜನಶೀಲ ಕಲಾವಿದರನ್ನು ಸತ್ಕರಿಸುವ ಮೂಲಕ ಪುರಸ್ಕಾರಗಳಿಗೇ ಮನ್ನಣೆ ದೊರೆಯುತ್ತದೆಯೇ ವಿನಾ ಕಲಾವಿದರಿಗಲ್ಲ. ನಂತರದ ೧೫ ವರ್ಷಗಳಲ್ಲಿ ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ. ತುಂಬಿದ ಕೊಡ ತುಳುಕದಂತೆ ಇಂಥ ಪ್ರಶಸ್ತಿಗಳು ಅವರನ್ನೇನೂ ಬದಲಾಯಿಸಿಲ್ಲ.

## ಗಜಾನನ ಅಭಿನಂದನ

ಇದೀಗ ಮಹಾಲೆಯವರಿಗೆ ೬೫ ವರ್ಷ ತುಂಬಿದೆ. ೬೫ ಕ್ಕೆ ಅಡಿಯಿಡುವಾಗ ಜನವರಿ ೧೫,೨೦೦೦ ದಂದು ಗದುಗಿನ ಶ್ರೀ ತೋಂಟದಾರ್ಯ ಮಠದ ಜಗದ್ಗುರು ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ಮಹಾಲೆಯವರನ್ನು ಸಾರ್ವಜನಿಕರು ಅದ್ದೂರಿಯಾಗಿ ಸನ್ಮಾನಿಸಿದರು. ಪ್ರೊ. ಸದಾನಂದ ಕನವಳ್ಳಿಯವರ ಅಧ್ಯಕ್ಷತೆಯಲ್ಲಿ 'ಶ್ರೀ ಗಜಾನನ ಮಹಾಲೆ ಅಭಿನಂದನ ಸಮಿತಿ'ಯನ್ನು ರಚಿಸಿ, ಅವರ ಅರ್ಥಪೂರ್ಣ ಅಭಿನಂದನ ಸಮಾರಂಭವು ಧಾರವಾಡದ ಡಾ. ಮಲ್ಲಿಕಾರ್ಜುನ ಮನ್ಸೂರ ಕಲಾಭವನದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಹಾಲೆ ದಂಪತಿಗಳನ್ನು ಆತ್ಮೀಯವಾಗಿ ಸನ್ಮಾನಿಸಿ ಒಂದು ಲಕ್ಷ ರೂಪಾಯಿಗಳ ಹಮ್ಮಿಣಿಯನ್ನು ಅರ್ಪಿಸಲಾಗಿದೆ. ಅಭಿಮಾನಿಗಳ ಸ್ಪಂದನ ಪ್ರತಿಕ್ರಿಯೆ, ಉತ್ಸಾಹ ಉಲ್ಲಾಸಗಳ ಫಲಶ್ರುತಿ ಎಂಬಂತೆ ಮತ್ತೆ ಐವತ್ತು ಸಾವಿರ ರೂಪಾಯಿಗಳು ಹಿಂದಿನಿಂದ ನೀಡಲಾಯಿತು. ಶೋಷಿತ, ನಿರ್ಲಕ್ಷಿತ ಕಲಾವಿದನನ್ನು ಕೊನೆಗೂ ಕಲಾದೇವಿಯು ಲಕ್ಷಾಧಿಪತಿಯನ್ನಾಗಿ ಮಾಡಿದಳು.

## ಅದೇ ಮನ ಅದೇ ಮನೆ

ಮಹಾಲೆಯವರು ಇಂದಿಗೂ 'ಮಹಿಷಿ ಬ್ಲಾಕ್'ನ ಅದೇ ಮುರುಕಲು ಮನೆಯಲ್ಲಿಯೇ ವಾಸವಾಗಿದ್ದಾರೆ. ಹಿಂದೆ ತಿಂಗಳಿಗೆ ೫ ರೂಪಾಯಿ ಬಾಡಿಗೆ ಕೊಡುತ್ತಿದ್ದ ಮನೆಗೆ ಈಗ ಮುನ್ನೂರು ರೂಪಾಯಿ ಕೊಡುತ್ತಿದ್ದಾರೆ. ಪತ್ನಿ ಜಯಾ ಹಾಗೂ ಇಬ್ಬರು ಮಕ್ಕಳೊಂದಿಗೆ ತೀರಾ ಸರಳ ರೀತಿಯಲ್ಲಿ ಬಾಳುತ್ತಿದ್ದಾರೆ. ಮಹಾಲೆಯವರದು ಆದರ್ಶಮಯ ಜೀವನ. ಕೋಲು ಮುಖ, ತೀಕ್ಷ್ಣ ಕಣ್ಣು, ಬಿಳಿಗೂದಲು, ತೆಳು ಮೀಸೆ, ಹಸನ್ಮುಖಿ, ಆತ್ಮೀಯ, ಆದರೆ ಹಿತ ಮಾತು, ಜುಬ್ಬಾ ಪಾಯಿಜಾಮು ಇದು ಮಹಾಲೆಯವರ ವ್ಯಕ್ತಿತ್ವ.

ಮಗಳು ಭಾರತಿ ಕರ್ನಾಟಕ ಕಾಲೇಜಿನಲ್ಲಿ ಬಿ.ಕಾಂ. ಮುಗಿಸಿ ಕಾರ್ಪೋರೇಶನ್ ಬ್ಯಾಂಕ್ ಉದ್ಯೋಗಿ, ಕೃಷ್ಣಾನಂದ ಮಹಾಲೆಯವರೊಂದಿಗೆ ವಿವಾಹವಾಗಿದ್ದಾರೆ. ಮಾವನವರ ಹೋರಾಟದ ಬದುಕಿನ ಅರಿವಿದ್ದ ಕೃಷ್ಣಾನಂದ ವರದಕ್ಷಿಣೆ ಅಪೇಕ್ಷಿಸದೆ ಭಾರತಿಯ ಕೈ ಹಿಡಿದು ಮನೆತುಂಬಿಸಿಕೊಂಡಿದ್ದಾರೆ. ಮಹಾಲೆಯವರು ಮದುವೆಗಾಗಿ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿಯೊಂದಿಗೆ ಸಂದ ರೂ. ೫,೦೦೦ ಮತ್ತು ಪತ್ನಿ ಜಯಾ ಶೇಖರಿಸಿಟ್ಟ ಹಣವನ್ನು ಉಪಯೋಗಿಸಿ ಮದುವೆ ಮಾಡಿದ್ದಾರೆ. ಮಗಳು ಮತ್ತು ಅಳಿಯ ಬಿಡುವಾದಾಗಲೆಲ್ಲ ಮಕ್ಕಳೊಂದಿಗೆ ಬಂದು ಹೋಗುತ್ತಿರುತ್ತಾರೆ.

ಹಿರಿಯ ಮಗ ಕಿರಣ ಪಿ.ಯು.ಸಿ. ಓದಿದ್ದು, ಕಿರಿಯ ಮಗ ಸಂತೋಷ ಕರ್ನಾಟಕ ಕಾಲೇಜಿನಲ್ಲಿ ಬಿ.ಕಾಂ. ಓದಿ ತಂದೆಗೆ ಪ್ರಸಾಧನ ಕಲೆಯಲ್ಲಿ ನೆರವಾಗುತ್ತಿದ್ದಾನೆ. ಅಲ್ಲದೆ

'ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾಸ್' (ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ) ಯಲ್ಲಿ ತರಬೇತಿ ಪಡೆದಿದ್ದಾರೆ. ಅಭಿನಯ ಪ್ರಸಾಧನ ರಂಗ ಪರಿಕರಗಳ ಜೋಡಣೆ, ವ್ಯವಸ್ಥಾಪನೆಯಲ್ಲಿ ಆಸಕ್ತರಾಗಿದ್ದಾರೆ. ಸಿ. ಬಸವಲಿಂಗಯ್ಯನವರಿಂದ ಮಾರ್ಗದರ್ಶನ ಪಡೆದಿದ್ದಾರೆ. ಅವರ ನಿರ್ದೇಶನದ 'ಅಕ್ಕರಮಾಸಿ' (ಮೂಲ ಮರಾಠೀ ಶರಣ ಕುಮಾರ ನಿಂಬಾಳ ) ಪಾತ್ರ ನಿರ್ವಹಿಸಿದ್ದಾರೆ.

ಅದೇ ರೀತಿ ಉರ್ದು ನಾಟಕ ಅನೋಖಾ ಖೇಲ್ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾಗಿದ್ದು, ಅದರಲ್ಲಿ ಜಹಿರ್‌ನ ಪಾತ್ರ ನಿರ್ವಹಿಸಿದ್ದಾರೆ. 'ಅನಿಸ್ ಬಾರೂದವಾಲೆ' ನಿರ್ದೇಶನ 'ಖಿರೋಖಿರ್', ಕನ್ನಡ ನಾಟಕದಲ್ಲಿ ಹಮಾಲಿಯ ಪಾತ್ರವನ್ನು ಮಾಡಿ ಪ್ರೇಕ್ಷಕರ ಮನಸೂರೆಗೊಂಡಿದ್ದಾರೆ. ಹಾಗೂ ಲೇಖನಗಳನ್ನೂ ಸಹ ಬರೆದಿದ್ದಾರೆ. ಹಿರಿಯ ಮಗ ಕಿರಣ ನೌಕರಿಯ ತಲಾಶೆಯಲ್ಲಿದ್ದಾರೆ.

ಗಜಾನನ ಮಹಾಲೆ ೭೫ ರ ವಯಸ್ಸಿನಲ್ಲಿಯೂ ಉತ್ಕಟ ಚೇತೋಹಾರಿ. ಪ್ರಶಸ್ತಿಗಳಿಂದ ಬೀಗದ ನಿರಹಂಕಾರಿ, ಶುದ್ಧ ಶಾಖಾಹಾರಿ, ನಡೆನುಡಿಗಳಲ್ಲಿ ಸುವಿಚಾರಿ, ತೊದಲು ನುಡಿಯ ಕೂಸಿನಂತೆ ಮಾತಿನ ಸಿರಿಯ ಈ ಮನುಷ್ಯ ವಿಭಿನ್ನ ಬಗೆಯ ಮುಖಗಳನ್ನು ಚಿತ್ರಿಸುವ ನಾಯಕ, ಖಳನಾಯಕರನ್ನು ರೂಪಿಸುವ ಬಹುಮುಖ ಪ್ರತಿಭೆಯ ಈ ಧೀಮಂತ ಅಂತಹ ಮುಖವಾಡವನ್ನು ಧರಿಸಿದ ಮನುಷ್ಯ. ಕನ್ನಡದ ಗಂಡುಮೆಟ್ಟಿನ ನೆಲದ ಕಲೆಗಾರ. ಮಹಾಲೆ ಸಹಧರ್ಮಿಣಿ ಜಯಾಳ ಜೊತೆ ನೂರು ಕಾಲ ಬದುಕಲಿ, ಎಂದು ನಟರಾಜನಲ್ಲಿ ನಿವೇದನೆ.

## ಮಕ್ಕಳ ಕಣ್ಣಲ್ಲಿ ತಂದೆ ಮಹಾಲೆ
## (ಪುತ್ರಿ ಭಾರತಿ ಹೇಳುವಂತೆ)

ತಂದೆಯವರು ನಾವು ಸಣ್ಣವರಿದ್ದಾಗ ಮುಂದಿನ ಒಳ್ಳೆಯ ಭವಿಷ್ಯದ ಸಲುವಾಗಿ, ಒಳ್ಳೆಯ ಶಿಕ್ಷಣ ಕೊಟ್ಟು, ನಮಗೆ ದೊಡ್ಡವರನ್ನಾಗಿ ಮಾಡಲು ಬಹಳ ಕಷ್ಟಪಟ್ಟಿದ್ದಾರೆ. ಒಂದು ಒಪ್ಪತ್ತಿನ ಊಟದ ಸಲುವಾಗಿ ತಂದೆಯವರು ಕಷ್ಟಪಟ್ಟಿದ್ದು ನೋಡಿ ನೆನೆಸಿಕೊಂಡರೆ ನಮಗೆ ಅತೀವ ದುಃಖವಾಗುತ್ತದೆ.

ಕಷ್ಟದಲ್ಲಿಯೂ ನಮಗೆ ಬೆಳೆಸಿ, ಒಳ್ಳೆಯ ಶಿಕ್ಷಣ, ಒಳ್ಳೆಯ ನಡತೆ ಕಲಿಸಿ ನಾವು ಈಗ ಸುಖದಿಂದ ಇರಲಿಕ್ಕೆ ತಂದೆಯವರೇ ಕಾರಣ. ಬಿಸಿಲು ಮಳೆಯನ್ನದೇ ಬರಿಗಾಲಲ್ಲಿ ಎಲ್ಲಿ ಕರೆದಲ್ಲಿ ಮನೆ ಮನೆಗೆ ಹೋಗಿ ಕ್ಷೌರಿಕ ವೃತ್ತಿಯನ್ನು ಮಾಡಬರುವದು, ಎಣ್ಣೆ ಹಚ್ಚಿ ಮಾಲಿಶ ಮಾಡಬರುವದು, ಆದರೆ ಹಣಕೊಡುವುದರಲ್ಲಿ ಹಿಂಜರಿಯುತ್ತಿದ್ದರು, ಇವತ್ತು ಬಾ, ನಾಳೆ ಬಾ ಅನ್ನುತ್ತಿದ್ದರು. ಹಾಗೆಯೇ ಸಂಜೆಗೆ ಎಲ್ಲಿಯಾದರೂ ಮನರಂಜನೆ ಕಾರ್ಯಕ್ರಮಗಳಿದ್ದರೆ ಹಾರ್ಮೋನಿಯಂ ನುಡಿಸುವದು, ಮೇಕಪ್ ಮಾಡಲಿಕ್ಕೆ

ಹೋಗುತ್ತಿದ್ದರು. ಅಲ್ಲಿ ಹಣದ ಸಲುವಾಗಿ ಇಷ್ಟೇ ಕೊಡು ಅಂತ ಕೈ ಒಡ್ಡುತ್ತಿರಲಿಲ್ಲ. ಅವರು ಕೊಟ್ಟಷ್ಟು ಹಣ ತರುತ್ತಿದ್ದರು. ಅದಕ್ಕಾಗಿ ನಮ್ಮ ಮನೆಯಲ್ಲಿ ಜೀವನವೇ ಕಷ್ಟವಾಯಿತು. ಆದ್ದರಿಂದ ಒಂದೇ ಒಪ್ಪತ್ತು ಊಟ ಮಾಡಿ, ರಾತ್ರಿ ಬ್ರೆಡ್ ಅವಲಕ್ಕಿ ತಿಂದು ಮಲಗಿ ಬಿಡುತ್ತಿದ್ದೆವು.

ತಂದೆಯವರಿಗೆ ಮೊದಲಿಂದಲೂ ಕಲೆಯ ಬಗ್ಗೆ ಬಹಳ ಉತ್ಸಾಹವಿತ್ತು ಆದರೆ ಅವರಿಗೆ ಮುಂದೆ ಹೋಗಲು ಯಾರ ಪ್ರೋತ್ಸಾಹವೂ ಸಿಗಲಿಲ್ಲ. ಕ್ಷೌರಿಕ ವೃತ್ತಿಯನ್ನು ಮುಂದುವರೆಸಿ, ಹಾರ್ಮೋನಿಯಂ ನುಡಿಸುವುದು, ಮುಖವಾಡಗಳನ್ನು ತಯಾರಿಸುವದು, ಮೂರ್ತಿಗಳನ್ನು ಮಣ್ಣಿನಿಂದ ರಚಿಸುವದು ಇವೆಲ್ಲಾ ಮಾಡುತ್ತಾ ಬಂದರು. ಆ ವೇಳೆಗೆ ತಂದೆಯವರ ಕಲೆಯನ್ನು ಗುರುತಿಸುವವರಾರಿಲಲಿಲ್ಲ. ಏಕೆಂದರೆ ಅವರೊಬ್ಬರು ಬಡವರು. ಅದರಲ್ಲಿ ಅವರು ಕ್ಷೌರಿಕರು. ಆದರೆ ಕಲೆಯಲ್ಲಿ ಎಷ್ಟು ಶ್ರಮ, ಕಷ್ಟ ಇದೆ ಅಂತ ಕಲೆ ಬಗ್ಗೆ ಗೊತ್ತಿದ್ದವರಿಗೆ ಗೊತ್ತು.

ತಂದೆಯವರು ಮದುವೆ ಮಂಟಪ ತಯಾರಿಸಲು ಹೋಗುತ್ತಿದ್ದರು. ಮಂಟಪಕ್ಕೆ ಬೇಕಾಗುವ ಸಾಮಾನುಗಳು, ಬಾಂಬುಗಳು, ಬಾಂಬುವಿನ ಎಳೆಗಳನ್ನು ಡಬ್ಬಗಳನ್ನು ಎರಡು ಭುಜದ ಮೇಲೆ ಇಟ್ಟುಕೊಂಡು ಬರಿಗಾಲಲ್ಲಿ ಮದುವೆ ಹಾಲ್ ತನಕ ಹೋಗುವದು, ತಾಯಿಯವರು ನಮಗೆ ಮೂರು ಮಕ್ಕಳಿಗೆ ಕರೆದುಕೊಂಡು ಹೋಗುತ್ತಿದ್ದರು. ನಾವು ಆವಾಗ ಬಹಳ ಸಣ್ಣವರು, ಸಣ್ಣಪುಟ್ಟ ಕೆಲಸಗಳನ್ನು ಮಾಡಿ ಮಲಗಿ ಬಿಡುತ್ತಿದ್ದೆವು. ಮಂಟಪವನ್ನು ತಂದೆ ತಾಯಿ ಇಬ್ಬರೂ ರಾತ್ರಿಯಿಂದ ಬೆಳಗಿನತನಕ ಪೂರ್ತಿ ಮಾಡಿಟ್ಟು ನಮಗೆ ಕರೆದುಕೊಂಡು ಬಂದು ಬಿಡುತ್ತಿದ್ದರು. ಆಮೇಲೆ ಹಾಗೇ ನಾವು ತಿಂಡಿ ತಿಂದು ಸ್ನಾನ ಮಾಡಿ, ಶಾಲೆಯಲ್ಲಿ ಕೊಟ್ಟ ಸಮವಸ್ತ್ರ ಧರಿಸಿ ಶಾಲೆಗೆ ಹೋಗುತ್ತಿದ್ದೆವು.

ಶಾಲೆಯಲ್ಲಿ ನಮಗೆ ಸಮವಸ್ತ್ರ ಪುಸ್ತಕ ಕೊಡುತ್ತಿದ್ದರು. ಇದರಿಂದ ನಮ್ಮ ತಂದೆಯವರಿಗೆ ಬಹಳ ಸಹಾಯವಾಯಿತು. ಬಡತನದಲ್ಲಿ ನಮಗೆ ಶಿಕ್ಷಣವನ್ನು ಕೊಟ್ಟ ಶಾಲೆಯನ್ನು ನಾವು ಎಂದೂ ಮರೆಯುವದಿಲ್ಲ.

ಸಣ್ಣ ಮನೆ, ಸಣ್ಣ ದೀಪದ ಮುಂದೆ ಕುಳಿತು ತಂದೆಯವರು ಡ್ರಾಯಿಂಗ್ ಬಿಡಿಸುವದು, ಮೂರ್ತಿ ತಯಾರಿಸುತ್ತಿದ್ದರು ಈಗಲೂ ಸಹಾ ಹಾಗೇ ಇದ್ದಾರೆ.

ನಾವು ನಮ್ಮ ತಂದೆಯವರಿಗೆ ಹೇಳುತ್ತಾ ಇರುತ್ತಿದ್ದೆವು, ಹೋದಲ್ಲೆಲ್ಲಾ ಹಣ ತೆಗೆದುಕೊಂಡು ಬರುವದಿಲ್ಲ ಹಾಗೆ ಬರುತ್ತೀರಿ ಅಂತ. ನಾವು ಮತ್ತು ನಮ್ಮ ತಾಯಿಯವರು ಬಯ್ಯುತ್ತಿದ್ದೆವು. ಹೋದಲೆಲ್ಲಾ ಹಣ ನಾಳೆ ಕೊಡುತ್ತೀವಿ ಅಂದರೆ ಅವರಿಗೆ ಕೈಮುಗಿದು ಬಂದು ಬಿಡುವರು. ಯಾರಿಗೂ ಪ್ರತ್ಯುತ್ತರ ಕೊಡದೇ ಬಂದು ಬಿಡುತ್ತಿದ್ದರು.

ತಂದೆಯವರು ಬಹಳ ಸರಳಜೀವಿ. ತಂದೆಯವರ ಈ ಗುಣದಿಂದ ಸರಕಾರದವರು ಅವರ ಕಲೆಯನ್ನು ಗುರುತಿಸಿ ರಾಜ್ಯಪ್ರಶಸ್ತಿ ಕೊಟ್ಟರು. ನಮಗೆ ಎಲ್ಲಿಲ್ಲದ ಖುಶಿಯಾಯಿತು. ದೇವರೇ ಕಣ್ತೆರೆದ. ತಂದೆ ತಾಯಿ ಇಬ್ಬರೂ ಬೆಂಗಳೂರಿಗೆ ಹೋಗಿ ಪ್ರಶಸ್ತಿ ತೆಗೆದುಕೊಂಡು ಬಂದರು. ಅಲ್ಲಿ ಕೊಟ್ಟ ಸಹಾಯ ಧನ ೫೦೦೦ ರೂಪಾಯಿಯನ್ನು ಮಗಳ ಮದುವೆಗೆ ಇಟ್ಟುಬಿಟ್ಟರು. ಮಗಳಿಗೆ ಒಳ್ಳೆಯ ಗಂಡನ ಮನೆ ನೋಡಿ ಸಾಲ ಮಾಡಿ ಮದುವೆ ಮಾಡಿಕೊಟ್ಟರು. ಅಳಿಯ ಬ್ಯಾಂಕ್ ಉದ್ಯೋಗಿಯಾಗಿದ್ದಾರೆ. ಅಳಿಯನಿಗೆ ಸಹ ತನ್ನ ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದಾರೆ. ಮಗಳು, ಅಳಿಯ, ಮೊಮ್ಮಕ್ಕಳಿಬ್ಬರೂ ಬರುತ್ತಾರೆಂದರೆ ಸಾಕು ಅವರಿಗೆ ಎಲ್ಲಿಲ್ಲದ ಸಂತೋಷ. ಒಂದು ವಾರದ ಮೊದಲೇ ಮನೆಯಲ್ಲಿ ಎಲ್ಲಾ ತಯಾರಿಯಲ್ಲಿರುತ್ತಾರೆ. ತಂದೆಯವರಿಗೆ ಯಾವಾಗ ರಾಜ್ಯಪ್ರಶಸ್ತಿ ಸಿಕ್ಕಿತೋ ಆವಾಗಿನಿಂದ ಎಲ್ಲ ಕಲಾಪ್ರೇಮಿಗಳು ಬಹಳ ಕಡೆ ಸತ್ಕಾರ ಸಮಾರಂಭವನ್ನು ಇಟ್ಟುಕೊಂಡರು. ತಂದೆಯವರಿಗೆ ಎಲ್ಲರೂ ಈಗ ಸತ್ಕಾರ ಮಾಡುವದನ್ನು ನೋಡಿ ನಮಗೆ ಹಿಂದಿನದೆಲ್ಲ ನೆನಪಾಗಿ ತಂದೆಯವರು ಪಟ್ಟ ಕಷ್ಟ ದುಃಖವಾಗುತ್ತಿತ್ತು ರಸ್ತೆಯಲ್ಲಿ ಅವರ ಜೊತೆ ಹೋಗುವಾಗ ರಸ್ತೆಯಲ್ಲಿ ಅವರು ಜೊತೆ ಹೋಗುವಾಗ ಎಲ್ಲಿ ನೋಡಿದಲ್ಲಿ ಮಹಾಲೆ, ಮಹಾಲೆ ಅಂತ ಸಲಾಂ ಹೊಡೆಯುವರೇ ಬಹಳ ಅದನ್ನು ನೋಡಿ ಬಹಳ ಸಂತೋಷವಾಗುತ್ತದೆ. ಅದೇ ತಂದೆಗೆ ಹಿಂದೆ ಹಿಯಾಳಿಸುತ್ತಿದ್ದ ಜನರ ನೆನಪು ಬರುತ್ತದೆ.

ತಂದೆಯವರಿಗೆ ಮತ್ತೆ ಕಲಾಪ್ರೇಮಿಗಳು, ಕಲಾಕಾರರು ಸೇರಿ ಒಂದು ಲಕ್ಷ ರೂಪಾಯಿ ಕೊಟ್ಟು ಸತ್ಕಾರ ಮಾಡಿದರು. ಎಲ್ಲರೂ ಸೇರಿ ತಂದೆಯವರಿಗೆ ಸತ್ಕಾರ ಮಾಡುವ ದೊಡ್ಡ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಯಾವಾಗಲೂ ಸ್ಟೇಜ್ ಮೇಲೆ ನಿಂತು ಮಾತನಾಡದ ತಂದೆಯವರು ಆ ದಿನ ನಾಲ್ಕಾರು ಮಾತುಗಳನ್ನಾಡಿದರು. ಎಷ್ಟೋ ಜನರು ಅವರಿಗೆ ಕೈಗೆ ಕೈಕೊಟ್ಟು ತಬ್ಬಿಕೊಂಡು ತಮ್ಮ ಸಂತೋಷ, ಪ್ರೇಮವನ್ನು ಒಬ್ಬರೊಬ್ಬರು ಹಂಚಿಕೊಳ್ಳುವುದನ್ನು ನೋಡಿ ನಮಗೆ ಸಂತೋಷದ ಜೊತೆಗೆ ದುಃಖವಾಯಿತು. ನಮಗೆ ಮನಸಲ್ಲೇ ಅಳು ಬರುತ್ತಿತ್ತು. ತಂದೆಯವರು ಹಿಂದೆ ಇಷ್ಟು ಕಷ್ಟ ಪಟ್ಟಿದಕ್ಕೆ ಸಾರ್ಥಕವಾಯಿತು ಎಂದು ಸಮಾಧಾನವಾಯಿತು. ತಂದೆಯರ ಬಗ್ಗೆ ಬಹಳ ಹೆಮ್ಮೆ ಎನಿಸುತ್ತದೆ. ನಾವು ಅವರ ಮಕ್ಕಳಾಗಿ ಹುಟ್ಟಿದ್ದಕ್ಕೆ ನಾವು ನಿಜವಾಗಲೂ ಪುಣ್ಯ ಮಾಡಿದ್ದೇವೆ. ನಮ್ಮ ತಂದೆಯವರ ಜೊತೆ ಸೇರಿ ತಾಯಿಯವರೂ ಸಹ ಅವರ ಕಷ್ಟ ಸುಃಖದಲ್ಲಿ ಭಾಗಿಯಾಗಿ ಹಸಿಯೆಂಬುದು ಮರೆದು ನಮಗೆ ಸಾಕಿ, ಸಲಹಿಸಿ ಒಳ್ಳೆ ದಾರಿಯಲ್ಲಿ ನಡೆಯುವಂತೆ ಮಾಡಿದ್ದಾರೆ.

ನಮ್ಮ ಯಶಸ್ಸಿನ ಕಾರಣಕ್ಕಾಗಿ, ಸುಖಕ್ಕಾಗಿ ಇರುವದಕ್ಕೆ ನಮ್ಮ ತಂದೆ ತಾಯಿಯವರೇ ಕಾರಣ.

ದೇವರು ಅವರಿಗೆ ಆಯುರಾರೋಗ್ಯ ಕೊಟ್ಟು ಸುಖವಾಗಿ ಇಡಲಿ ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ.


# ಅನುಬಂಧ

## ಇವರಿಗೆ ಸಿಕ್ಕ ಸನ್ಮಾನಗಳು ಅನೇಕ

| | | |
|---|---|---|
| ❖ | ಸಂಗೀತ ಭಾರತಿ, ಧಾರವಾಡ | ೨೫.೧.೧೯೯೮ |
| ❖ | ಭಾರತ ಸ್ಕೌಟ್ಸ್ ಆಂಡ್ ಗೈಡ್ಸ್, ಕರ್ನಾಟಕ | ೨.೮.೧೯೮೬ |
| ❖ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೨.೩.೧೯೮೮ |
| ❖ | ಮಿತ್ರ ಬಳಗ, ಹಾವೇರಿ | ೧೧.೧.೧೯೮೮ |
| ❖ | ರಂಗಚೇತನ, ಧಾರವಾಡ | ೪.೩.೧೯೮೮ |
| ❖ | ಜೈಂಟ್ಸ್ ಗ್ರೂಪ್ ಆಫ್ ಹುಬ್ಬಳ್ಳಿ | ೯.೪.೧೯೮೮ |
| ❖ | ಕರ್ನಾಟಕ ಸಂಘ ರಿ., ಅಂಕೋಲಾ | ೨೧.೧.೧೯೮೮ |
| ❖ | ಸಮುದಾಯ ರಂಗಮೇಳ ೧೯೮೮ ಹುಬ್ಬಳ್ಳಿ,ಧಾರವಾಡ | ೧೫.೫.೧೯೮೮ |
| ❖ | ರಂಗಸಂಪದ ಬೆಳಗಾಂವ | ೨೦.೮.೧೯೮೮ |
| ❖ | ನೈಪಥ್ಯ ಶಿಲ್ಪ | ೧೬.೧೧.೧೯೮೮ |
| ❖ | ರೋಟರಿ ಕ್ಲಬ್, ಧಾರವಾಡ | ೧೦.೨.೧೯೮೮ |
| ❖ | ಇನರ್‌ವ್ಹಿಲ್ ಕ್ಲಬ್ ಆಫ್ ಹುಬ್ಬಳ್ಳಿ | ೨೬.೧೦.೧೯೯೫ |
| ❖ | ಸ್ನೇಹ ಕಲಾವೃಂದ ಮತ್ತು ಸಾಹಿತ್ಯ ಮಂಟಪ ಹಾವೇರಿ | ೧.೨.೧೯೯೬ |
| ❖ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಬ್ಯಾಡಗಿ | ೨೧.೯.೧೯೯೭ |
| ❖ | ನೂಪುರ ನೃತ್ಯಶಾಲೆ, ಹುಬ್ಬಳ್ಳಿ | ೧೯೯೮ ೯೯ |
| ❖ | ವಿಜಯ ಕಂಕಣ ಕನ್ನಡ ವರ್ಣಚಿತ್ರ, ಹುಬ್ಬಳ್ಳಿ | ೨೧.೬.೧೯೯೩ |
| ❖ | ಮಾಸಾಶನ | ೪.೧೨.೧೯೯೮ |
| ❖ | ಕರ್ನಾಟಕ ಸರ್ಕಾರ ಸಪ್ತರಂಜನಿ | ೧೯೮೯ |
| ❖ | ಕರ್ನಾಟಕ ರಾಜ್ಯೋತ್ಸವ | ೧೯೯೯ |
| ❖ | ರಂಗಮಿತ್ರರು, ಧಾರವಾಡ | ೧೯೯೯ |
| ❖ | ಸ್ನೇಹಿತರು, ಧಾರವಾಡ | ೧೯೯೯-೨೦೦೦ |
| ❖ | ಅಭಿನಯ ಭಾರತಿ, ಧಾರವಾಡ | ೨೦೦೦-೨೦೦೧ |
| | ಶ್ರೀ ಕುಮಾರೇಶ್ವರ ಪ್ರಸಾದ ನಿಲಯ ಮತ್ತು ಶ್ರೀ ಸಿದ್ಧರಾಮೇಶ್ವರ ಪದವಿಪೂರ್ವ ಮಹಾವಿದ್ಯಾಲಯ, ಶಿವಬಸವ ನಗರ, ಬೆಳಗಾಂವ ೧೫೦,೦೦೦ ಹಮ್ಮಿಣಿ ಅರ್ಪಣೆ ಹಾಗೂ ಸನ್ಮಾನ | ೧೪.೧.೨೦೦೦ |

- ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ, ಜಿಲ್ಲಾ ಘಟಕ ಹಾವೇರಿ ೧೯೯೯
- ರಂಗಸ್ನೇಹ ೧೯೯೯ ಅತ್ಯುತ್ತಮ ಪ್ರಸಾಧನ ಮದುಮಗ
  ಸಂತೋಷನಿಗೆ
  ಪಂಢರಪುರ ದೇವಸ್ಥಾನ ೧೯೯೮-೯೯
- ಕೊಂಕಣಿ ಹವ್ಯಾಸಿ ಕಲಾ ಸಂಘ, ಧಾರವಾಡ ೧೯೯೬-೯೭
- ಬ್ಯಾಂಕರ್ಸ್ ಕಲ್ಚರಲ್ ಅಕಾಡೆಮಿ, ಧಾರವಾಡ
- ನೂಪುರ ನೃತ್ಯಶಾಲೆ ೧೩ನೆ ವಾರ್ಷಿಕೋತ್ಸವ, ೧೯೯೭
- ಬ್ಯಾಂಕರ್ಸ್ ಕಲ್ಚರಲ್ ಅಕಾಡೆಮಿ, ಧಾರವಾಡ ೧೯೯೮
- ಚಿ.ಪಾರ್ಶ್ವನಾಥ ಎಸ್ ಉಪಾಧ್ಯ ಆರೆಗ್ರೇಟರಮ್
  ರಂಗಪ್ರವೇಶ ೧೯೯೬- ೯೭
- ಸ್ನೇಹ ಕಲಾವೃಂದ, ಹಾವೇರಿ ೧೯೯೫-೯೬
- ಕೆ.ಇ.ಬೋರ್ಡ್ಸ್ ಹೈಸ್ಕೂಲ್, ಧಾರವಾಡ
- ಗಜಾನನ ಯುವಕ ಮಂಡಳ, ಶೇಷಗಿರಿ, ತಾ. ಹಾನಗಲ್ಲ
- ಮದುರಂಗ ಕಲಾವೃಂದ ಕಾಸ್ಮೋ ೨೦೦೦
- ಭೂಮಿಕಾ ಹೊಸಪೇಟ, ಕಾರ್ತಿಕ ರಂಗೋತ್ಸವ ೧೯೯೯
- ಭೂಮಿಕಾ ಹೊಸಪೇಟ, ಕಾರ್ತಿಕ ರಂಗೋತ್ಸವ ೨೦೦೦
- ಆರ್ಟ ಗ್ಯಾಲರಿ, ಧಾರವಾಡ ೧೯೯೯ ೨೦೦೦
- ಸ್ನೇಹಿತರು, ಧಾರವಾಡ ೨೦೦೦
- ಪ್ರಜ್ವಲ ಕೊಂಕಣಿ ಹವ್ಯಾಸಿ ಕಲಾ ಸಂಘ, ಧಾರವಾಡ
- ರಂಗಸಂಭ್ರಮ, ವಿಜಾಪುರ ೧೯೯೯
- ಸಂಸ್ಕೃತ ಭಾರತಿ ೧೯೯೮
- ಗ್ರಾಮರಂಗ, ರಟ್ಟೆಹಳ್ಳಿ ೧೯೯೧
- ಸಾಹಿತ್ಯ ಮಂಟಪ ಹಾಗೂ ಸ್ನೇಹ ಕಲಾವೃಂದ, ಹಾವೇರಿ ೧೯೯೭
- ಶ್ರೀ ಸದ್ಗುರು ಕಲಾಕ್ಷೇತ್ರ, ಹುಬ್ಬಳ್ಳಿ ೧೯೯೬
- ಬಣ್ಣದ ಗೆಳೆಯರು ೨೦೦೦
- ಕಲಾ ಮಂಜರಿ, ಧಾರವಾಡ ೧೯೯೬
- ಉಪಾಧ್ಯೆ ನೃತ್ಯವಿಹಾರ ೧೯೮೭,೮೮,೮೯- ೨೦೦೦
- ಧಾರವಾಡ ಜಿಲ್ಲಾ ಉತ್ಸವ ೧೯೯೯

- ಬ್ರಹ್ಮಕುಮಾರಿ ಈಶ್ವರೀ ವಿಶ್ವವಿದ್ಯಾಲಯ ೧೯೮೮
- ರೋಟರಿ ಕ್ಲಬ್ ೧೯೯೭
- ಸ್ನೇಹಿತರು ೧೯೯೯
- ನೂಪುರ ನೃತ್ಯಶಾಲೆ, ಹುಬ್ಬಳ್ಳಿ ೧೯೯೫
- ಡಾ. ದ. ರಾ. ಬೇಂದ್ರೆ ಭವನ ಶತದಿನೋತ್ಸವ ಧಾರವಾಡ
- ರಂಗೋತ್ಸವ ೨೦೦೦
- ಸ್ಕೂಲ್ ಆಫ್ ಆರ್ಟ ೧೯೯೫
- ಕಲಾಶ್ರೀ ಪ್ರಶಸ್ತಿ ೨೦೦೦
- ಲಾಯನ್ಸ್ ಕ್ಲಬ್, ಧಾರವಾಡ ೧೯೯೭
- ಜಿ.ಎ.ಬಿ. ಸಮಾಜ, ಧಾರವಾಡ
- ನಾಟಕ ಅಕಾಡೆಮಿ ೧೯೮೭,೮೮
- ಶ್ರೀ ಕಾಲಭೈರವದೇವ ಸೇವಾ ನಾಟಕ ಸಂಘ, ಗೋಕರ್ಣ ೧೯೮೪
- ಶ್ರೀ ಕಾಲಭೈರವದೇವ ಸೇವಾ ನಾಟಕ ಸಂಘ, ಗೋಕರ್ಣ ೨೦೦೦
- ಕರ್ನಾಟಕ ಕಲೋದ್ಧಾರಕ ಸಂಘ ೧೯೮೪
- ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಪ್ತಮಂಡಲದ ನಾಟಕೋತ್ಸವ ೧೯೮೯
- ಆನಂದ ಕಂದ ಗೆಳೆಯರ ಬಳಗ ಬೆಟಗೇರಿ, ಗೋಕಾಕ ೨೦೦೦



ಪತ್ನಿ ಜಯಾ ಅವರೊಂದಿಗೆ ಗಜಾನನ ಮಹಾಲೆ



ಕುಟುಂಬದ ಸದಸ್ಯರೊಂದಿಗೆ ಮಹಾಲೆ ದಂಪತಿಗಳು



ಗಜಾನನ ಮಹಾಲೆ ಅವರು ಪ್ರಸಾಧನ ಮಾಡಿದ ಒಂದು ನಾಟಕದ ದೃಶ್ಯ



ಪುತ್ರ ಸಂತೋಷನೊಂದಿಗೆ ಗಜಾನನರು ಮಾಡಿದ ಇನ್ನೊಂದು ಪ್ರಸಾಧನಬಂಧ




ತಾವು ನಿರ್ಮಿಸಿದ ಗಣಪತಿ ಮೂರ್ತಿಗೆ ಬಣ್ಣ ನೀಡಿ ಸಿದ್ಧಪಡಿಸುತ್ತಿರುವದು



ಗಜಾನನ ಮಹಾಲೆ ನಿರ್ಮಿಸಿದ ಅನೇಕ ಗಣಪತಿ ಮೂರ್ತಿಗಳಲ್ಲಿ ಒಂದು



ಗದುಗಿನ ತೋಂಟದಾರ್ಯ ಮಠದ ಡಾ. ಸಿದ್ಧಲಿಂಗ ಸ್ವಾಮೀಜಿಯೊಂದಿಗೆ ಗಜಾನನ ಮಹಾಲೆ



ಗಜಾನನ ಮಹಾಲೆಯವರಿಗೆ ೭೫ ತುಂಬಿದಾಗ ಧಾರವಾಡದಲ್ಲಿ ಸಾರ್ವಜನಿಕ ಸಮ್ಮಾನ




ನೂಪುರ ನೃತ್ಯವಿಹಾರ, ಹುಬ್ಬಳ್ಳಿ ಮತ್ತು ಉಪಾಧ್ಯೆ ನೃತ್ಯ ವಿಹಾರ, ಧಾರವಾಡ
ಇವರಿಂದ
ಗಜಾನನ ಮಹಾಲೆಯವರಿಗೆ ಹುಬ್ಬಳ್ಳಿಯಲ್ಲಿ ಸನ್ಮಾನ



# ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ. ಜಿ. ಕೃಷ್ಣಸ್ವಾಮಿ, ಬೆಂಗಳೂರು
ಅಧ್ಯಕ್ಷರು
೨. ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ, ಧಾರವಾಡ
೩. ಶ್ರೀ ಚೆನ್ನವೀರ ಝಳಕಿ, ಬಿಜಾಪುರ
೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ
೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ
೬. ಶ್ರೀ ಶಿವರಾಂ, ಮಂಡ್ಯ
೭. ಶ್ರೀ ಸಿ. ಎಂ. ನರಸಿಂಹಮೂರ್ತಿ, ಚಾಮರಾಜನಗರ
೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ
೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು
೧೦. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ
೧೧. ಶ್ರೀ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ
೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು
೧೩. ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು
೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು
೧೫. ಶ್ರೀ ಟಿ. ರಘು, ಬೆಂಗಳೂರು
೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು
೧೭. ಶ್ರೀ ಎಚ್. ಎಸ್. ನೀಲಕಂಠ, ಬೆಂಗಳೂರು
೧೮. ಶ್ರೀಮತಿ ಎಸ್. ಮಾಲತಿ, ಸಾಗರ
೧೯. ಶ್ರೀ ಸಿ. ಕೆ. ಗುಂಡಣ್ಣ, ಬೆಂಗಳೂರು
೨೦. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು
೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ
೨೨. ಶ್ರೀ ಎಚ್. ಎಸ್. ಉಮೇಶ್, ಮೈಸೂರು
೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು
೨೪. ಶ್ರೀ ಐ. ಕೆ. ಬೊಳುವಾರ್, ಪುತ್ತೂರು
೨೫. ಶ್ರೀ ಹೂಲಿ ಶೇಖರ್, ಅಂಬಿಕಾನಗರ
೨೬. ಶ್ರೀ ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್
೨೭. ಆರ್. ಎಸ್. ದಳವಾಯಿ
ಅರ್ಥಸದಸ್ಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ